ಕೊಬ್ಬರಿಗೆ ಒಟ್ಟು 6,500 ರೂಪಾಯಿಯಂತೆ ರೈತರಿಗೆ ನೀಡಲಾಗುವುದು. ರೈತರಿಂದ ಖರೀದಿಸಲಾಗುವ ಉಂಡೆ ಕೊಬ್ಬರಿಗೆ ಬೆಂಬಲ ಬೆಲೆ ಹಾಗೂ ಪ್ರೋತ್ಸಾಹಧನ ಸೇರಿದಂತೆ ಹಣವನ್ನು ತಕ್ಷಣವೇ ಆ ವರ್ತನಿಧಿಯಿಂದ ಪಾವತಿ ಮಾಡಲಾಗುವುದು. ಅವಶ್ಯಕತೆಗೆ ತಕ್ಕಂತೆ ಖರೀದಿ ಕೇಂದ್ರಗಳನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ವತಿಯಿಂದ ತೆರೆಯಲಾಗುವುದೆಂದು ತಿಳಿಸುವುದಕ್ಕೆ ಸಂತೋಷಪಡುತ್ತೇನೆ.

ಅಧ್ಯಕ್ಷರು : ಈಗ ಶಾಸನ ರಚನೆ ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

5. **ಶಾಸನ ರಚನೆ**

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು
ಕರ್ನಾಟಕ ಪಂಚಾಯತ್ ರಾಜ್(ತಿದ್ದುಪಡಿ) ವಿಧೇಯಕ 2013

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ (ತಿದ್ದುಪಡಿ) ವಿಧೇಯಕ 2013, ಇದೊಂದು ಅತ್ಯಂತ ಸರಳವಾದ ಹಾಗೂ ನಮ್ಮ ಗ್ರಾಮ ಪಂಚಾಯಿತಿಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಬೇಕು, ಗ್ರಾಮ ಸಭೆಗಳಿಗೆ ಹೆಚ್ಚು ಮಹತ್ವ ಇರಬೇಕು, ಗ್ರಾಮ ಸಭೆಗಳು ಶಾಸನದ ಮುಖಾಂತರ, ಸಂವಿಧಾನದ ಮುಖಾಂತರ ನಾವು ಸಾಕಷ್ಟು ಒತ್ತು ಕೊಟ್ಟು ಅವುಗಳಿಗೆ ಮಹತ್ವ ನೀಡಿದ್ದರೂ ಸಹ ಹಲವಾರು ಕಾರಣಗಳಿಂದ ಹಾಗೂ ಕೆಲವು ಬೇಜವಾಬ್ದಾರಿ ವ್ಯಕ್ತಿಗಳಿಂದಾಗಿ ನಮ್ಮ ಉದ್ದೇಶವೇ ಸಫಲವಾಗದ ಹಾಗೆ ಈ ವ್ಯವಸ್ಥೆಯನ್ನು ತಿರುಚುವಂತಹ ಪ್ರಯತ್ನ ಮಾಡುವವರಿದ್ದಾರೆನ್ನುವುದು ನಮಗೆಲ್ಲರಿಗೂ ಕೂಡ ತಿಳಿದಿರುವಂತಹ ಸಂಗತಿ. ಆ ಹಿನ್ನೆಲೆಯೊಳಗೆ ಶಾಸನ ಸಭೆಯಲ್ಲಾಗಲಿ, ಹೊರಗಾಗಲಿ ಗ್ರಾಮ ಸಭೆಯ ಮಹತ್ವವನ್ನು ಸಾಕಷ್ಟು ಒತ್ತಿ ಹೇಳಿ, ಇವತ್ತು

ಸರಿಯಾಗಿ ಕೆಲಸ ಮಾಡಿ ಎಂದು ನಾವು ಹೇಳುತ್ತಿದ್ದರೂ ಕೂಡ, ಅದು ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಆ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯನಿರ್ವಹಣೆಯಲ್ಲಿ ಅರಿವು ಮೂಡಿಸುವುದರ ಸಲುವಾಗಿ, ಶಿಸ್ತನ್ನು ತರುವುದರ ಸಲುವಾಗಿ, ಅದರ ಜೊತೆಗೆ ಅದರ ಅಧ್ಯಕ್ಷರಾಗಿರುವವರಾಗಲಿ, ಅಧಿಕಾರದಲ್ಲಿರುವವರಾಗಲಿ, ಅವರಿಗೆ ಶಾಸನಾತ್ಮಕವಾಗಿರುವಂತಹ ಕರ್ತವ್ಯಗಳನ್ನು ಹಾಗೂ ಹೊಣೆಗಾರಿಕೆಯನ್ನು ತಿಳಿಸಬೇಕು. ಅವರು ಅದನ್ನು ತಪ್ಪಿದರೆ ನಮ್ಮನ್ನು ಹಾಗೆ ಬಿಡುವುದಿಲ್ಲವೆಂದು ಎಲ್ಲೋ ಒಂದು ಕಡೆ ನಮ್ಮ ಜವಾಬ್ದಾರಿಗೆ ಕುತ್ತು ಬರುತ್ತದೆನ್ನುವ ಒಂದು ಸಂದರ್ಭ ಸೃಷ್ಟಿಯಾಗಲೇಬೇಕಾಗುತ್ತದೆ. ಆ ಕರ್ತವ್ಯ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕೆನ್ನುವ ಕಾರಣಕ್ಕಾಗಿ ಇದನ್ನು ತಂದಿದ್ದೇವೆ. ಆರು ತಿಂಗಳಿಗೊಮ್ಮೆ ಗ್ರಾಮ ಸಭೆ ಸೇರಬೇಕು. ಪಂಚಾಯಿತಿ ಅಧ್ಯಕ್ಷ ಆ ಸಭೆಯನ್ನು ಕರೆಯಬೇಕು ಎಂದು ನಮಗೆಲ್ಲ ಗೊತ್ತಿದೆ. ಆದರೆ ಕಳೆದ ಹಲವು ವರ್ಷಗಳಲ್ಲಿ ನಡೆದಿರತಕ್ಕಂಥ ಪರಿಸ್ಥಿತಿಯೇ ಬೇರೆ. ಆದುದರಿಂದ ಯಾವ ಅಧ್ಯಕ್ಷ ಗ್ರಾಮ ಸಭೆಯನ್ನು ಕರೆಯುವುದಕ್ಕೆ ಆಸಕ್ತಿ ವಹಿಸುವುದಿಲ್ಲ ಅಥವಾ ಕರೆಯದ ಹಾಗೆ ನೋಡುತ್ತಾನೆ, ಯಾವ ಸದಸ್ಯ ward ಸಭೆಗಳನ್ನು ನಡೆಸುವುದಿಲ್ಲ, ಅಂತಹವರ ಮೇಲೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸದ್ಯದ ಕಾನೂನಿನಡಿಯಲ್ಲಿ ಅವಕಾಶವಿರಲಿಲ್ಲ. ಹಾಗಾಗಿ ಯಾರು ವಾರ್ಡ್ ಸಭೆಯನ್ನು, ಗ್ರಾಮಸಭೆಯನ್ನು ಕರೆಯಬೇಕಾಗಿರುವಂತಹ ಜವಾಬ್ದಾರಿ ಹೊಂದಿರುತ್ತಾರೆ, ಅವರು ಆ ಸಭೆಗಳನ್ನು ಕರೆಯದೇ ಹೋದರೆ ಅವರ ಮೇಲೆ ಕ್ರಮ ಜರುಗಿಸತಕ್ಕಂಥ, ಅವರ disqualification attract ಮಾಡುವಂತಹ ಒಂದು provision ಮಾಡಿ, ಈ ಸಂದರ್ಭದಲ್ಲಿ ಗ್ರಾಮ ಸಭೆಗೆ ಮಹತ್ವ ಕೊಡಬೇಕೆನ್ನುವ ಸಂದೇಶ ಎಲ್ಲರಿಗೂ ಹೋಗಬೇಕು. ಕೇವಲ ಅಧ್ಯಕ್ಷರು ಮಾತ್ರ ಅಲ್ಲ, ವಾರ್ಡ್ ಸಭೆ ಅತ್ಯಂತ ಪ್ರಮುಖವಾದುದು. ಅದು ಶಿಫಾರಸ್ಸು ಮಾಡತಕ್ಕಂಥದ್ದು ಇರಬಹುದು. That is the fundamental body. ಆ ಒಂದು ವಾರ್ಡ್ ಸಭೆಯನ್ನು ಕರೆಯುವುದಕ್ಕೆ, ಗ್ರಾಮಸಭೆ ನಡೆಸುವುದಕ್ಕೆ ಯಾರು ಜವಾಬ್ದಾರರಿದ್ದಾರೆ, ಅದನ್ನು ತಾತ್ಸಾರ ಮಾಡುವಂತಹ, ನಿರ್ಲಕ್ಷ್ಯ ಮಾಡುವಂತಹ ಸದಸ್ಯನಿಗೆ, ಗ್ರಾಮ ಪಂಚಾಯಿತಿ ಅಧ್ಯಕ್ಷ ಆ ಸಭೆಯನ್ನು ನಡೆಸದೇ ಹೋದರೆ, ಅವರು disqualification provision attract ಮಾಡುವಂತಹ ಅವಕಾಶ

ಮಾಡಿರುವಂತಹ ಈ ಕಾನೂನನ್ನು ಈ ಸಂದರ್ಭದಲ್ಲಿ ನಾವು ತಂದಿದ್ದೇವೆ. ನನಗೆ ವಿಶ್ವಾಸ ಇದೆ. ತಾವೆಲ್ಲರೂ ಈ ಗ್ರಾಮಸಭೆಯನ್ನು ಶಕ್ತಿಶಾಲಿ ಮಾಡಬೇಕೆನ್ನುತ್ತೀರಿ. ಕೇವಲ ಗ್ರಾಮಸಭೆಯನ್ನು ಶಕ್ತಿಶಾಲಿ ಮಾಡುವುದಷ್ಟೇ ಅಲ್ಲ. ಈ ಗ್ರಾಮ ಸಭೆಗಳು ಸರಿಯಾಗಿ ನಡೆಯಬೇಕು, ಗ್ರಾಮಸಭೆ ಎಲ್ಲೋ ಒಂದು ಕಡೆ ನಡೆಯಿತು ಎನ್ನುವುದಲ್ಲ, ಅದನ್ನು photograph ಮಾಡಬೇಕು, video graph ಮಾಡಬೇಕು. ಅಲ್ಲಿ ಏನೇನು proceedings ನಡೆಯುತ್ತದೆ, ಅದನ್ನು ಯಾರ್ಯಾರಿಗೆ ಮುಟ್ಟಿಸಬೇಕೋ ಅದನ್ನು ಮುಟ್ಟಿಸುವಂಥ ಈ ಎಲ್ಲಾ ಪ್ರಕ್ರಿಯೆಗಳು ಏನಿವೆ, ನಾವು ಅದೆಲ್ಲವನ್ನು ಮಾಡುವಂಥ ದೊಡ್ಡ ಬದಲಾವಣೆಯನ್ನು ತರಲು ಬಯಸುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಇದರಲ್ಲಿ ಹೆಚ್ಚು ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ, ಆದರೆ ತಾವು ಬೇರೆ ಬೇರೆ ರೀತಿಯಿಂದ ಮಾರ್ಗದರ್ಶನವನ್ನು ಇದರಲ್ಲಿ ಕೊಡಬಹುದು. ಒಟ್ಟಾರೆ ಉದ್ದೇಶವೇನೆಂದರೆ, ಗ್ರಾಮ ಪಂಚಾಯಿತಿಯನ್ನು ಅತ್ಯಂತ ಪರಿಣಾಮಕಾರಿ ಸಂಸ್ಥೆಯನ್ನಾಗಿ ಮಾಡಬೇಕು, ಗ್ರಾಮ ಸಭೆಗೆ ಏನು ಸಂವಿಧಾನ ಮಹತ್ವವನ್ನು ಕೊಟ್ಟಿದೆ, ನಮ್ಮ ಕಾನೂನು ಏನು ಮಹತ್ವವನ್ನು ಕೊಟ್ಟಿದೆ, ಆ ಮಹತ್ವ ಇರುವ ಹಾಗೆ ಮಾಡಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೇವೆ. ಆದ್ದರಿಂದ ತಾವು ದಯಮಾಡಿ ಇದನ್ನು ಒಪ್ಪಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ಮಾನ್ಯ ಪಂಚಾಯತ್ ರಾಜ್ ಸಚಿವರು ತಂದಿರುವಂಥ ಈ ವಿಧೇಯಕ ಏನು ಇದೆ, ಇದು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ Father of Nation ಪೂಜ್ಯ ಮಹಾತ್ಮ ಗಾಂಧಿಯವರು ಏನು ಕನಸನ್ನು ಕಂಡಿದ್ದರು, ಅದರಿಂದ ಪಂಚಾಯತ್ ರಾಜ್ ವ್ಯವಸ್ಥೆ ಪ್ರಾರಂಭವಾಯಿತಷ್ಟೇ ವಿನಃ ಕನಸೆಲ್ಲಾ ಇವತ್ತು ನನಸಾಗುವುದಕ್ಕೆ ಆಗಿಲ್ಲ. ಆದರೆ ಇವತ್ತಿನ ವಿಧೇಯಕವನ್ನು ಸ್ವಲ್ಪಮಟ್ಟಿಗೆ ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಸಂಪೂರ್ಣವಾಗಿ ಬದಲಾವಣೆಯನ್ನು ತರುವಂಥ, ಕೆಲವು ಮಾರ್ಪಾಡುಗಳನ್ನು ಮಾಡುವಂಥದ್ದು ಅತ್ಯಂತ ಅವಶ್ಯಕತೆ ಇದೆ. ಬಹುಶಃ ಇದು ತಮ್ಮ ಕೈಯಲ್ಲಿ ಸಾಧ್ಯವೆಂದು ನಾನು ಒಪ್ಪುವುದಕ್ಕೆ ತಯಾರಿದ್ದೇನೆ, ಇದರಲ್ಲಿ ನಮ್ಮದು ಏನೂ dispute ಇಲ್ಲ. ತಾವು

ಇದಕ್ಕೆ ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಂಡು, ಇದರಲ್ಲಿ ತಾವು ದುರ್ನಡತೆಗಾಗಿ ಸದಸ್ಯರುಗಳನ್ನು ತೆಗೆದುಹಾಕುವುದೆಂಬ ಒಂದು ಪದವಿದೆ. ನಾನು ನಿನ್ನೆ ದಿವಸ ಇಲ್ಲಿ ಖಾಸಗಿಯಾಗಿ ಮಾತನಾಡುತ್ತಾ ಹೇಳುತ್ತಿದ್ದೆ, ಎಷ್ಟೋ ಜನರು ಇಲ್ಲಿ ನಾನು, ಇನ್ನೊಬ್ಬರು ಎಂದು ಅಲ್ಲ. ಇಲ್ಲಿ ನಿಷ್ಕ್ರಿಯವಾಗಿರುವ ಶಾಸಕರು ಇರಬಹದು, ಎಷ್ಟೋ ಜನ ಅಧಿಕಾರಿಗಳು ಇರಬಹುದು, ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ, ನಾವೆಲ್ಲಾ 100% perfect ಎಂದು ಹೇಳುವುದಕ್ಕಾಗುವುದಿಲ್ಲ. ಲೋಕಸಭೆಯಿಂದ ಹಿಡಿದು ಪಂಚಾಯಿತಿಯವರೆಗೂ ಇರುವ ಎಲ್ಲಾ ಹಂತಗಳಲ್ಲೂ ಆಯ್ಕೆಯಾಗುವಂಥ ಜನಪ್ರತಿನಿಧಿಗಳು, ಉಪಯೋಗ ಇರುವವರು, ಉಪಯೋಗವಿಲ್ಲದೇ ಇರುವವರು, ಒಳ್ಳೆಯವರಿದ್ದು ಉಪಯೋಗ ಆಗದೇ ಇರುವವರು ಬಹಳ ಜನರು ಇವತ್ತು ಇದ್ದಾರೆ. ಆದರೆ ಇವತ್ತು ಪಂಚಾಯತ್ ವ್ಯವಸ್ಥೆಯಲ್ಲಿ ನೇರವಾಗಿ ಹೇಳಿದ್ದೀರಿ, ಅಲ್ಲಿ ಆಡಳಿತ ಮಾಡುವಂಥವರು ಶಾಸಕರು, ಸರ್ಕಾರದಲ್ಲಿ ಇರುವಂಥವರು ಪ್ರಭಾವ ಬೀರಿ ಯಾವುದೋ ಒಬ್ಬ minority, backward,SC/STಯವರು ಒಬ್ಬರು ಅಧ್ಯಕ್ಷರಾದರೆ ಅವರು innocent ಇರುತ್ತಾರೆ. ಅವರಿಗೆ ಅಧಿಕಾರಿಗಳು ಸರಿಯಾಗಿ ಮಾರ್ಗದರ್ಶನ ಮಾಡದೆ, ಆ ನಿಷ್ಕ್ರಿಯತೆಯನ್ನು ಉಪಯೋಗ ಮಾಡಿಕೊಂಡು, ಅವರನ್ನು disqualify ಮಾಡಲು ಹೋದಾಗ, ಅವರು ಪುನಃ Courtಗೆ ಹೋಗುತ್ತಾರೆ, stay ತರುತ್ತಾರೆ. ಇದರಿಂದ ನಿಮಗೆ ಏನು ಪ್ರಯೋಜನವಾಗುತ್ತದೆ? ಎರಡನೆಯದಾಗಿ, ಇಂಥ innocentಗಳನ್ನು disqualify ಮಾಡುವುದರಿಂದ ಪಂಚಾಯತ್‌ರಾಜ್ ವ್ಯವಸ್ಥೆಗೆ ಶಕ್ತಿ ತುಂಬಿದ ಹಾಗೆ ಆಗುತ್ತದಾ? ತಾವು ಅದರ ಬಗ್ಗೆಯೂ ಯೋಚನೆ ಮಾಡಬೇಕು. ಇದರ ಬಗ್ಗೆ ನನ್ನ ಕನಿಷ್ಠ ಅನಿಸಿಕೆ, ಇವತ್ತು ಜನಪ್ರತಿನಿಧಿಗಳಿಗೆ ಇಂಥ education ಇರಲೇಬೇಕೆಂದು fix ಮಾಡುವುದಕ್ಕೆ ಸಂವಿಧಾನದ ಅಡಿಯಲ್ಲಿ ಸಾಧ್ಯವಿಲ್ಲ. ಆದರೆ ಇದಕ್ಕೆ ತಾವು ಯಾವ ರೀತಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಢಗೊಳಿಸುವುದಕ್ಕೆ ಸಾಧ್ಯವೆನ್ನುವುದರ ಬಗ್ಗೆ ಸುದೀರ್ಘವಾಗಿ ಚರ್ಚೆಯೂ ಆಗಬೇಕಾಗುತ್ತದೆ. ನಮ್ಮ ಅಧ್ಯಕ್ಷರು ವಿಷಯವನ್ನು ಎರಡೇ ಮಾತುಗಳಲ್ಲಿ ಹೇಳಿ ಎಂದು ಹೇಳುತ್ತಾರೆ. ದಯಮಾಡಿ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆ ನಡೆಯುತ್ತದೆ. ತಾವು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಿಗೆ

20–20 ತಿಂಗಳು ಎಂದು ಮಾಡಿದ್ದೀರಿ. ಗ್ರಾಮ ಪಂಚಾಯತ್‌ಗೆ 30 ತಿಂಗಳು ಎಂದು ಮಾಡಿದ್ದೀರಿ. ಇವತ್ತು ಏನು ನಡೆಯುತ್ತಿದೆಯೆಂಬ ಬಗ್ಗೆ ಮಾಹಿತಿ ಏನೆಂಬುದನ್ನು ಕೇಳಿ, ಕುದುರೆ ವ್ಯಾಪಾರವಾಗಿದೆ. ಒಂದು ಅಧ್ಯಕ್ಷರ ಚುನಾವಣೆ ಆದರೆ ಅವರು ಯಾವ ಪಕ್ಷದಿಂದಲೂ ಗೆದ್ದಿರುವುದಿಲ್ಲ. ಒಬ್ಬೊಬ್ಬರು ಪಂಚಾಯಿತಿಗಳಲ್ಲಿ 10 ಲಕ್ಷ ರೂ.ಗಳು, 20 ಲಕ್ಷ ರೂ.ಗಳನ್ನು ಖರ್ಚು ಮಾಡಿ ಗೆಲ್ಲುವಂಥ ಪರಿಸ್ಥಿತಿಗೆ ಬಂದಿದ್ದಾರೆ. ಗ್ರಾಮ ಸಡಕ್ ಯೋಜನೆಯಲ್ಲಿ ಹಣ ಬರುತ್ತದೆಂದು, ಮತ್ತೆ ಆಶ್ರಯ ಮನೆಗಳಿಗೆ ಒಂದು ಲಕ್ಷ ಮನೆ ಮಾಡಿದರೆ, ಒಂದೊಂದು ಮನೆಗೆ 10 ಸಾವಿರ ರೂ.ಗಳು collect ಆಗುತ್ತಿದೆ. ಈ ರೀತಿ ಎಲ್ಲವೂ ಬರುವುದರಿಂದ ಇಲ್ಲಿ ದುಡ್ಡು ಕೊಟ್ಟು ಗೆದ್ದಿದ್ದೇನೆ, ನನ್ನನ್ನು ಏಕೆ ಕೇಳುತ್ತೀರಾ ಎಂದು ಕೇಳುತ್ತಾರೆ. ಈ ರೀತಿಯ ಪರಿಸ್ಥಿತಿಗಳು ಸ್ಥಳೀಯವಾಗಿದೆ. ಅಧ್ಯಕ್ಷರನ್ನು, ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತ್‌ನಿಂದ ನೇರವಾಗಿ ಆಯ್ಕೆ ಮಾಡಲು ಸಾಧ್ಯವೇ? ಎಂಬ ಬಗ್ಗೆ ಆಲೋಚನೆ ಮಾಡುವ ಬಗ್ಗೆ ಹಿಂದೆ ಸಾಕಷ್ಟು ಚರ್ಚೆಯಾಗಿದೆ. ಈ ವಿಚಾರದಲ್ಲಿ ಹಿಂದೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಂತ್ರಿಯಾಗಿದ್ದಾಗ ಇದರ ಬಗ್ಗೆ discussion ಮಾಡಿ ಒಂದು committeeಯನ್ನು ಮಾಡಿದ್ದರೆಂದು ಹೇಳಿದರು. ಗ್ರಾಮಪಂಚಾಯತ್ ಆಗಲಿ, ತಾಲ್ಲೂಕು ಪಂಚಾಯತ್ ಆಗಲಿ, ಜಿಲ್ಲಾ ಪಂಚಾಯತ್ ಆಗಲಿ, ಅದಕ್ಕೆ ತೊಡಕು ಬರಬಹುದು. ಇಲ್ಲಿ reservation ಇರುವುದರಿಂದ ಇಲ್ಲಿ ನೇರವಾಗಿ ಆಯ್ಕೆ ಮಾಡುವುದಕ್ಕೆ ಹೋದರೆ ಅಧ್ಯಕ್ಷರ reservation ಅನ್ನು ತೆಗೆಯಬೇಕಾಗುತ್ತದೆ. ಇವೆಲ್ಲದರ ಬಗ್ಗೆ ಏಕಾಏಕಿಯಾಗಿ ನಾವು ಹೇಳಿದ್ದೇ ಸರಿ ಎಂದು ಹೇಳುವುದಕ್ಕೆ ಆಗುತ್ತಿಲ್ಲ. ಆದರೆ disqualification ಬಗ್ಗೆ ತಾವು ಮಾಡಿರುವಂಥ ಈ ವಿಧೇಯಕವು ಎಷ್ಟು ಪರಿಣಾಮಕಾರಿಯಾಗಿ ಪಂಚಾಯಿತಿಗಳನ್ನು ಸದೃಢಗೊಳಿಸುವುದಕ್ಕೆ ಸಾಧ್ಯವಾಗುತ್ತದೆ? ಅಥವಾ ಬಲಹೀನರಿಗೆ ತೊಂದರೆ ಕೊಡುವುದಕ್ಕೆ ಅನುಕೂಲ ಆಗುತ್ತದಾ? ಇದನ್ನು ರಾಜಕೀಯ ದ್ವೇಷಕ್ಕೋಸ್ಕರ ಇದನ್ನು ಉಪಯೋಗಿಸಿಕೊಂಡು ಕೆಲವರನ್ನು ಮಾತ್ರ ಇದರಿಂದ ಹೊರಗೆ ಇಡುವುದಕ್ಕೆ ಅನುಕೂಲವಾಗುತ್ತದಾ? ಈ ವಿಷಯಗಳಲ್ಲಿ ನಮಗೆ ಸ್ವಲ್ಪ confusion ಇದೆ. ದಯಮಾಡಿ ನನ್ನ request ಏನೆಂದರೆ, ಇದನ್ನು ಮುಂದೂಡಿ ಮುಂದಿನ sessionಗೆ ತೆಗೆದುಕೊಂಡು ಬನ್ನಿ. ಸುದೀರ್ಘವಾಗಿ

ಒಂದೆರಡು-ಮೂರು ಮೀಟಿಂಗ್‌ಗಳನ್ನು ಮಾಡಿ, ಇದರ ಬಗ್ಗೆ ನೀವು ನಮಗೆಲ್ಲರಿಗಿಂತ ತಾವು ಬುದ್ಧಿವಂತರಿದ್ದೀರಿ. ಹಾಗಾಗಿ ಇಡೀ ಪಂಚಾಯತ್ ವ್ಯವಸ್ಥೆಯನ್ನು ಏನಾದರೂ ಸರಿಪಡಿಸುವಂಥ ವಿಧೇಯಕವನ್ನು ತಂದು ಮಾಡುವುದಾದರೆ, ಅತ್ಯಂತ ಸ್ವಾಗತ, ನಾನು ತಮಗೆ ಅಭಿನಂದಿಸುತ್ತೇನೆ. ಇದು ಅತ್ಯಂತ ಅವಶ್ಯಕತೆ ಇದೆ, ನಾವ್ಯಾರೂ ಹತ್ತಿರಕ್ಕೆ ಹೋಗದ ಹಾಗೆ ಪಂಚಾಯಿತಿಯಲ್ಲಿ ಸಂಪೂರ್ಣವಾಗಿ ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವಂಥ ಕೆಲಸ ಆಗತಕ್ಕಂಥ ತೀರ್ಮಾನವನ್ನು ತಾವು ತರುವುದಾದರೆ, ಅದಕ್ಕಿಂತ ಸಂತೋಷ ಬೇರೆ ಇಲ್ಲ. ಮತ್ತೆ ಅಧಿಕಾರಿಗಳು ಬಹಳ mislead ಮಾಡುವಂಥದ್ದು ಜಾಸ್ತಿ ಇದೆ. ಇಲ್ಲಿ ಅಧ್ಯಕ್ಷರು ಓದಿದ್ದಾರೋ, ಬಿಟ್ಟಿದ್ದಾರೋ, ಅವರು ದಡ್ಡರೋ, ಹೆಬ್ಬೆಟ್ಟೋ, ಗೊತ್ತಿಲ್ಲ. ಅವರಿಗೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಿ, ಆ ಪಂಚಾಯಿತಿಯ ಆಡಳಿತವನ್ನು ನಡೆಸಿಕೊಂಡು ಹೋಗುವಂಥ ಕೆಲಸವನ್ನು PDOಗಳಿಗೆ, Secretaryಗಳಿಗೆ ಮತ್ತು EOಗಳಿಗೆ ತಾವು ಕಟ್ಟುನಿಟ್ಟಾಗಿ circular ಅನ್ನು ಆಗಿಂದಾಗ್ಗೆ ಕೊಡಬೇಕಾಗುತ್ತದೆ. ಅಧಿಕಾರಿಗಳು ನಮಗೆ ಗೊತ್ತಿಲ್ಲ, ಅಧ್ಯಕ್ಷರು ತಪ್ಪಿದ್ದಾರೆಂದು ಅವರು ಒಂದಷ್ಟು, ಇವರು ಒಂದಷ್ಟು ತೆಗೆದುಕೊಂಡು sign ಹಾಕಿಸಿಕೊಂಡು ಅವರನ್ನು ತಪ್ಪು ದಾರಿಗೆ ಎಳೆಯುವಂಥದ್ದು ಆಗುತ್ತದೆ. ನಮ್ಮ ಬಳಿ ಎಷ್ಟೋ ಜನರು ಬಂದು, ನಾನು ಅಧ್ಯಕ್ಷನಾಗಿ ಬಂದು 10 ತಿಂಗಳಾಯಿತು, ನನಗೆ ಏನೂ ಸಿಕ್ಕೇ ಇಲ್ಲ, ನನಗೆ PDOಗಳು ಒಂದು ರೂಪಾಯಿಯನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. ಇಲ್ಲಿ ಕಾರ್ಯದರ್ಶಿಗಳು ಸಹಿ ಹಾಕುತ್ತಾರೆ, ಇವೆಲ್ಲವೂ ಇದೆ. ಏಕಾಏಕಿ ನಾವು ಇಲ್ಲಿ ಕುಳಿತುಕೊಂಡು ಜನಪ್ರತಿನಿಧಿಗಳು ಪಂಚಾಯತ್ ರಾಜ್ ನವರು ಜನ ಪ್ರತಿನಿಧಿಗಳಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ನಾನು ಆಗಲೇ ಹೇಳಿದ ಹಾಗೆ ಎಷ್ಟೋ ಜನ ಶಾಸಕರು, KDP meeting ಮಾಡದೇ ಇರುವಂಥದ್ದನ್ನು ನಾವು ನೋಡಿದ್ದೇವೆ. ಅದೇ ರೀತಿಯಲ್ಲಿ ಎಷ್ಟೋ ಜನ ಮಂತ್ರಿಗಳು ಮೀಟಿಂಗ್ ಮಾಡದೇ ಇರುವಂಥದ್ದನ್ನು ನೋಡಿದ್ದೇವೆ. ಆದ್ದರಿಂದ ನಾವು ಇವರಿಗೆ ಒಂದು ನ್ಯಾಯ, ಅವರಿಗೆ ಒಂದು ನ್ಯಾಯವೆಂದು ಹೇಳುವುದಕ್ಕಾಗುವುದಿಲ್ಲ. ನಾವು ಇಲ್ಲಿ ಕುಳಿತಿದ್ದೇವೆಂದು ಪಂಚಾಯತ್‌ನವರ ಮೇಲೆ ಏನು ಬೇಕಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೆಂದು, ಶಾಸಕರುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲವೆಂದು

ಹೇಳುವುದಕ್ಕೆ ಆಗುವುದಿಲ್ಲ. ತಮಗೆ ಇಂಥ ವಿಚಾರಗಳಲ್ಲಿ ತಿಳಿವಳಿಕೆ ಇರುವುದರಿಂದ ಈ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು, ವಿಧೇಯಕವನ್ನು ಮಂಡಿಸುವಂಥದ್ದು ಒಳ್ಳೆಯದು, ಮತ್ತೆ ಇದರಿಂದ ಯಾವುದೇ ಒಬ್ಬ ಅಮಾಯಕ ಸದಸ್ಯನಿಗೆ ಅನ್ಯಾಯವಾಗಬಾರದು, ಇದನ್ನು ಕಾನೂನು ವ್ಯಾಪ್ತಿಯಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗುವಂಥದ್ದು, ಅದೆಲ್ಲಕ್ಕಿಂತ ಹೆಚ್ಚಾಗಿ ಆ ಒಂದು ವ್ಯವಸ್ಥೆ ಸರಿಯಾಗಿ ನಡೆದುಕೊಂಡು ಹೋಗುವುದಕ್ಕೆ ಅವಕಾಶವಾಗುವಂಥ ರೀತಿಯಲ್ಲಿ ಇದನ್ನು ಮಾಡುವುದು ಒಳ್ಳೆಯದು, ಮತ್ತೆ ಈ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಧಾರವಾಡ ಕೇಂದ್ರ) : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಯವರು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಂದಿದ್ದಾರೆ. ಈ ವಿಷಯದಲ್ಲಿ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಇಷ್ಟು ಅವಸರ ಏಕೆ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಈಗ ಹೊಸದಾಗಿ ಸರ್ಕಾರ ಬಂದಿದೆ, ಅಧಿಕಾರ ವಿಕೇಂದ್ರೀಕರಣ, ಬೇಲೂರು ಘೋಷಣೆ, ಇವೆಲ್ಲವನ್ನೂ ತಾವೇ ಮಾಡಿದ್ದು. ತಾವು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಈ ಕಡೆಗೆ ಇದ್ದಾಗಲೂ ಮಾತನಾಡಿದ್ದೀರಿ. ಮತ್ತೆ ಬೇಲೂರು ಘೋಷಣೆ ಮಾಡಿದಿರಿ, ಗ್ರಾಮ ಪಂಚಾಯತ್‌ನ ಕೆಳಹಂತದ ಆಡಳಿತ ವ್ಯವಸ್ಥೆ ಏನು ಇದೆ, ಆ ಗ್ರಾಮ ಪಂಚಾಯತ್ ಸದಸ್ಯರಿಗೆ ಎಲ್ಲಾ ರೀತಿಯ ಅಧಿಕಾರವನ್ನು ಕೊಡಬೇಕೆನ್ನುವ ಪ್ರತಿಪಾದನೆಯನ್ನು ಯಾವಾಗಲೂ ತಾವು ಮಾಡಿಕೊಂಡು ಬಂದಿದ್ದೀರಿ. ಅದಕ್ಕೆ ನಮ್ಮ ಪಕ್ಷವೂ ಸಹಿತ ಅಧಿಕಾರ ವಿಕೇಂದ್ರೀಕರಣ ಮತ್ತು ಕೆಳಹಂತದ ಪಂಚಾಯತ್ ಸದಸ್ಯರಿಗೆ ಎಲ್ಲಾ ರೀತಿಯ ಅಧಿಕಾರ ಇರಬೇಕೆನ್ನುವ ಬಗ್ಗೆ ನಮ್ಮ ವಾದವೂ ಇದೆ. ಇವತ್ತು ಈ ಒಂದು ವಿಧೇಯಕದ ಮುಖಾಂತರ ಎಲ್ಲೋ ಒಂದು ಕಡೆ ಗ್ರಾಮ ಪಂಚಾಯಿತಿ ಸದಸ್ಯರ ಒಂದು ಹಕ್ಕನ್ನು ಮೊಟಕುಗೊಳಿಸುವಂಥ ಪ್ರಯುತ್ನ ನಡೆಯುತ್ತಿದೆ ಎಂದು ನನಗನಿಸುತ್ತಿದೆ. ಇವತ್ತು ನಾವು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತೇವೆ. ಇವತ್ತು parliament, Assembly ಗಳಲ್ಲಿ 50%, 33% ಮಹಿಳೆಯರಿಗೆ reservation ಕೊಡಲಿಲ್ಲ. ಇಲ್ಲಿ OBCಯವರಿಗಾಗಲಿ, ಮತ್ತೊಬ್ಬರಿಗಾಗಲಿ,

Assembly ಮತ್ತು Parliament ಗಳಲ್ಲಿ reservation ಅನ್ನು ಕೊಟ್ಟಿಲ್ಲ. ಆದರೆ ಇವತ್ತು ಜನಾಂದೋಲನ ಆಡಳಿತ ವ್ಯವಸ್ಥೆಯಲ್ಲಿ 50% ಮಹಿಳಾ ಮೀಸಲಾತಿಯನ್ನು ನಾವು ನಮ್ಮ ಅಧಿಕಾರದ ಅವಧಿಯಲ್ಲಿ ಕೊಟ್ಟಿದ್ದೇವೆ. ಇವತ್ತು 33% OBC ಮತ್ತು ಇನ್ನಿತರ SC/STಗೂ ಸಹಿತ reservation ಇದೆ. ಈ ರೀತಿ ಇದ್ದಂಥ ವ್ಯವಸ್ಥೆಯಲ್ಲಿ ಇವತ್ತು ವಾರ್ಡ್ ಸಭೆ ಮತ್ತು ಗ್ರಾಮಸಭೆ ಕಡ್ಡಾಯವಾಗಿ ಆಗಬೇಕೆಂದು ಹೇಳಿ ವಾದ ಮಾಡಿದವನು ನಾನೂ ಹಿಂದೆ ನಾನು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವನಾಗಿ ಕೆಲವು ಹಳ್ಳಿಗಳಿಗೆ visit ಕೊಟ್ಟಂಥ ಸಂದರ್ಭದಲ್ಲಿ, ಕೆಲವೊಂದು ಗ್ರಾಮಸಭೆಗಳಿಗೆ ನಾವು surprise visit ಮಾಡಿದಂಥ ಸಂದರ್ಭದಲ್ಲೂ ಅವು ಸರಿಯಾಗಿ ನಡೆಯದೇ ಇರುವಂಥದ್ದು ಮತ್ತೆ timely 3 ತಿಂಗಳು, 6 ತಿಂಗಳು ನಿಗದಿತ time ಇದೆ, ಅದರಲ್ಲಿ ಸಭೆಯನ್ನು ಕರೆಯದೇ, ಮತ್ತೆ ಸಭೆಯನ್ನು ಕರೆದಾಗಲೂ ಸಹಿತ ಆ ಗ್ರಾಮಸಭೆಗಳು ಯಶಸ್ವಿಯಾಗಿ ನಡೆಯದೇ ಇರುವಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತು ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೆಳಹಂತದಲ್ಲಿರುವ ಆಡಳಿತ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ, ಅದನ್ನು ಸುಧಾರಣೆ ಮಾಡಲು ಏನು ಮಾಡಬೇಕೆನ್ನುವ ವಿಚಾರ ಮಾಡಬೇಕಾಗಿದೆ. ಅಲ್ಲಿ ಜಾಗೃತಿ ಉಂಟು ಮಾಡುವಂಥದ್ದು ಆಗಬೇಕು. ಗ್ರಾಮೀಣ ಭಾಗಗಳಲ್ಲಿ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳಿವೆ. ಯಾರೇ ಗ್ರಾಮ ಪಂಚಾಯಿತಿಯ ಸದಸ್ಯರಿರಲಿ, ಯಾರೇ ಅಧ್ಯಕ್ಷರಿರಲಿ, ಯಾರೇ ಉಪಾಧ್ಯಕ್ಷರಿರಲಿ, ಇಡೀ ಗ್ರಾಮ ಪಂಚಾಯಿತಿಯ ವ್ಯವಸ್ಥೆ ಆ ಪಟ್ಟಭದ್ರ ಹಿತಾಸಕ್ತಿಗಳ ಕಂಟ್ರೋಲ್‌ನಲ್ಲಿರುತ್ತದೆ. ಒಂದೊಂದು ಹಳ್ಳಿಯಲ್ಲೂ ಒಂದೊಂದು ಪಟ್ಟಭದ್ರ ಹಿತಾಸಕ್ತಿಗಳಿವೆ. ಅವರೇ ಎಲ್ಲ ಆಟ ಆಡುತ್ತಾರೆ. ಅಧ್ಯಕ್ಷರು ಯಾವುದಾದರೊಂದಕ್ಕೆ ಸಹಿ ಮಾಡಬೇಕೆಂದರೂ ಅವರ ಒಪ್ಪಿಗೆ ಇಲ್ಲದೇ ಅದು ನಡೆಯದಂಥ ಪರಿಸ್ಥಿತಿ ಇವತ್ತು ಗ್ರಾಮೀಣ ಭಾಗದಲ್ಲಿದೆ. ಈ ರೀತಿ ಪರಿಸ್ಥಿತಿ ಇರುವಂಥ ವ್ಯವಸ್ಥೆಯಲ್ಲಿ, ಮೀಸಲಾತಿ ಇರುವಂಥ ವ್ಯವಸ್ಥೆಯಲ್ಲಿ, ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಇಂಥ ಒಂದು ವಿಧೇಯಕವನ್ನು ತಂದಿದ್ದೀರಿ. ಯಾವಾಗಲೂ ಸಭೆಯನ್ನು ಕರೆಯುವಂಥವರು ಅಧಿಕಾರಿಗಳು. ಯಾವುದೇ ಒಂದು ಕಾರ್ಪೋರೇಷನ್ ಆಗಲೀ, ನಗರಸಭೆಯಾಗಲೀ, ಪುರಸಭೆಯಾಗಲೀ ಅದರ ಸಭೆಯನ್ನು

ಅಧಿಕಾರಿಗಳು ಕರೆಯಬೇಕು. ಹೀಗೆ ಕರೆದಂಥ ಸಭೆ ಯಶಸ್ವಿಯಾಗಿ ನಡೆಯುತ್ತದೆಯೋ, ಇಲ್ಲವೋ ಎನ್ನುವುದನ್ನು ಜನ ಪ್ರತಿನಿಧಿಗಳಾದ ನಾವು ನೋಡಿಕೊಳ್ಳಬೇಕು. ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಆ ಸಭೆಯನ್ನು ಕರೆಯಬೇಕು, ಈ Actನಲ್ಲಿ ಸಭೆ ಯಾರು ಕರೆಯಬೇಕೆನ್ನುವ ಬಗ್ಗೆ ಸ್ಪಷ್ಟತೆಯಿಲ್ಲ. ಇವತ್ತು ನೀವು ಗ್ರಾಮ ಪಂಚಾಯಿತಿ ಸಭೆಯನ್ನು ಕರೆಯಲು ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಮತ್ತು ವಾರ್ಡ್‌ಗಳ ಸಭೆಯನ್ನು ಕರೆಯಲು ಸಂಬಂಧಪಟ್ಟ ವಾರ್ಡ್ ಸದಸ್ಯರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ಸಭೆ ಕರೆದ ಮೇಲೆ ಅದು ಯಶಸ್ವಿಯಾಗುತ್ತದೋ, ಇಲ್ಲವೋ ಗೊತ್ತಿಲ್ಲ, ಸಭೆ ಸರಿಯಾಗಿ ನಡೆಯುತ್ತದೆಯೋ, ಇಲ್ಲವೋ ಗೊತ್ತಿಲ್ಲ. ನಾನು ಸಚಿವನಾಗಿದ್ದಾಗ ಪ್ರತಿಯೊಂದು ಗ್ರಾಮಸಭೆಯ video shooting ಮಾಡುವುದು ಕಂಪಲ್ಸರಿ ಎಂದು ಮಾಡಿದೆ. ಅದು ಕೆಲವು ಕಡೆ ಅನುಷ್ಠಾನವಾಯಿತು, ಕೆಲವು ಕಡೆ ಆಗಲಿಲ್ಲ. ಆಗದೇ ಇರುವಂಥ ಕಡೆಗಳಲ್ಲಿ ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನವನ್ನೂ ಮಾಡಿದೆ. ನಾವು ಇಷ್ಟೆಲ್ಲಾ restriction ಹಾಕಿದಾಗಲೂ ಕೂಡ ಗ್ರಾಮ ಸಭೆಗಳು ಸರಿಯಾಗಿ ನಡೆಯಲಿಲ್ಲ. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಹಲವಾರು ಯೋಜನೆಗಳು ಅದು ವಸತಿ ಯೋಜನೆ ಇರಬಹುದು, ಎಸ್.ಸಿ/ಎಸ್.ಟಿ. ಫಲಾನುಭವಿಗಳ ಆಯ್ಕೆ ಮಾಡದಿರಬಹುದು, Beneficiary list ಅದು ಆಗುವುದು ವಾರ್ಡ್ ಸಭೆ ಮತ್ತು ಗ್ರಾಮಸಭೆಯಲ್ಲಿ. ನಿಜವಾಗಿಯೂ ನಾವು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಿಜವಾಗಿಯೂ ಆ ಫಲಾನುಭವಿಗಳ ಪಟ್ಟಿ ಸರಿಯಾಗಿ ಹೊರಬರುತ್ತದೆಯೋ, ಇಲ್ಲವೋ ಎಂದು ಯೋಚನೆ ಮಾಡಿ. ವಾರ್ಡ್ ಮತ್ತು ಗ್ರಾಮಸಭೆಗಳಲ್ಲಿ ಕೆಲವೊಂದು ಹೆಸರು ಬಂದಿರುತ್ತವೆ. ಪಟ್ಟಿ ತಾಲ್ಲೂಕು ಪಂಚಾಯಿತಿಗೆ ಹೋಗುವಾಗ ಆ ಹೆಸರುಗಳು ಮಾಯವಾಗಿ ಮತ್ತೊಂದು ಬೇರೆ ಹೆಸರುಗಳು ಹೋಗುತ್ತವೆ. ಅದಕ್ಕೂ ಮೇಲಿನ ಹಂತದ ಜನಪ್ರತಿನಿಧಿಗಳಾದ ಜಿಲ್ಲಾ ಪಂಚಾಯಿತಿ ಸದಸ್ಯರ ಇನ್‌ವಾಲ್ವ್‌ಮೆಂಟ್, ಶಾಸಕರ ಇನ್‌ವಾಲ್ವ್‌ಮೆಂಟಾಗಿ ಕೊನೆಗೆ ಯಾವುದೋ ಒಂದು ಲಿಸ್ಟ್ ಹೊರಗೆ ಬರುತ್ತದೆ. ಆದ್ದರಿಂದ, ಗ್ರಾಮಸಭೆಗಳು ಮತ್ತು ವಾರ್ಡ್ ಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ಸರಿಯಾಗಿ ನಡೆಯುತ್ತಿದೆಯೋ, ಇಲ್ಲವೋ ಎನ್ನುವ ಬಗ್ಗೆ ವಿಚಾರ ಮಾಡಿ. ಇಲ್ಲಿ ನೀವು ಕೇವಲ ಗ್ರಾಮ ಸಭೆಯನ್ನು ಕರೆಯದಿದ್ದರೆ ಅಷ್ಟಕ್ಕೆ ಪನಿಷ್‌ಮೆಂಟ್ ಕೊಡುತ್ತಿದ್ದೀರಿ. ಆದರೆ ಗ್ರಾಮ ಸಭೆಗಳನ್ನು ಕರೆದ ಮೇಲೆ

ಅದು ಯಶಸ್ವಿಯಾಗಿ ನಡೆಯುತ್ತದೆಯೋ, ಇಲ್ಲವೋ ಎನ್ನುವ ಬಗ್ಗೆ ನಿಮಗ್ಯಾರಿಗೂ ಯೋಚನೆಯಿಲ್ಲ. ಗ್ರಾಮ ಸಭೆ ಕರೆಯುವುದಷ್ಟೇ ಅವನ ಕೆಲಸ, ಕರೆಯದಿದ್ದರಷ್ಟೇ ಅವನಿಗೆ ಪನಿಷ್‌ಮೆಂಟ್ ಕೊಡಲು ಹೊರಟಿದ್ದೀರಿ. ಕರೆದ ಮೇಲೆ ಪರಿಸ್ಥಿತಿ ಏನು? ಆ ಗ್ರಾಮಸಭೆಗಳು ಯಶಸ್ವಿಯಾಗಿ ಅನುಷ್ಠಾನವಾಗಲು ಏನು ಮಾಡಬೇಕು ಎನ್ನುವುದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಇವತ್ತು ನಿಮ್ಮ ಈ ವಿಧೇಯಕದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ಟಾರ್ಗೆಟ್ ಮಾಡುತ್ತೀರಿ, ಅವರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ. ಅವರಿಗೂ ಜವಾಬ್ದಾರಿ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಮೇಲಿನ ಹಂತದ ಜನಪ್ರತಿನಿಧಿಗಳಾದ ಎಂ.ಪಿ.ಗಳು, ಎಂ.ಎಲ್.ಎ.ಗಳು, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು, ಕೌನ್ಸಿಲರ್‌ಗಳಿಗೆ ಯಾವ ರೀತಿ ಜವಾಬ್ದಾರಿ ಇದೆಯೋ, ಅದೇ ರೀತಿ ಕೆಳ ಹಂತದ ಜನಪ್ರತಿನಿಧಿಗಳಾದ ಇವರ ಮೇಲೂ ಜವಾಬ್ದಾರಿ ಇರಬೇಕು. ಆದರೆ ಆ ಜವಾಬ್ದಾರಿಯನ್ನು ನಿಭಾಯಿಸದೇ ಇದ್ದಂಥ ಸಂದರ್ಭದಲ್ಲಿ ನೀವು ಗ್ರಾಮ ಪಂಚಾಯಿತಿಯ ಸದಸ್ಯರನ್ನು ಮಾತ್ರ ಟಾರ್ಗೆಟ್ ಮಾಡುತ್ತಿದ್ದೀರಿ. ಇದು ಸರಿಯಲ್ಲ ಎನ್ನುವುದು ನನ್ನ ವಾದ. ಅವರ ಮೇಲೆ ಜವಾಬ್ದಾರಿ ಹಾಕಿ, ಒತ್ತಾಯ ಮಾಡಿ ಕೆಲಸ ಮಾಡಿಸುವಂಥದ್ದನ್ನು ಮಾಡಿ. ಅದೇ ರೀತಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಪ್ರತಿ ಮೂರು ತಿಂಗಳಿಗೊಮ್ಮೆ ಕೆ.ಡಿ.ಪಿ. ಮೀಟಿಂಗ್ ಕರೆಯಬೇಕು. ಕರೆಯದಿದ್ದರೆ ಅವರಿಗೂ ಪನಿಷ್‌ಮೆಂಟ್ ಕೊಡುವಿರಾ? ಎಷ್ಟೋ ಜನ ಆ ರೀತಿ ಮೀಟಿಂಗ್ ಕರೆದಿಲ್ಲ. ಅವರನ್ನು ನೀವು disqualify ಮಾಡುವಿರಾ? District in-charge minister ಆದವರು ಪ್ರತಿ ಮೂರು ತಿಂಗಳಿಗೊಮ್ಮೆ ಕೆ.ಡಿ.ಪಿ. ಮೀಟಿಂಗ್ ಕರೆಯಬೇಕು ಎಂದು ಇದೆ. ಎಷ್ಟು ಜನ ಮಿನಿಸ್ಟರ್‌ಗಳು ರೆಗ್ಯುಲರ್ ಆಗಿ ಕೆ.ಡಿ.ಪಿ. ಮೀಟಿಂಗ್‌ಗಳನ್ನು ಕರೆಯುತ್ತಾರೆಂದು ಹೇಳಿ. ಅವರಿಗೂ ಪನಿಷ್‌ಮೆಂಟ್ ಕೊಡುವಿರಾ? ಅವರಿಗೆ ಪನಿಷ್‌ಮೆಂಟ್ ಇಲ್ಲ. ಆದರೆ ಈ ಕೆಲ ಹಂತದ ಜನ ಪ್ರತಿನಿಧಿಗಳಿಗೆ ಮಾತ್ರ ಏಕೆ ಈ ಪನಿಷ್‌ಮೆಂಟ್? ವರ್ಷಕ್ಕೆ 60 ದಿವಸ ಅಧಿವೇಶನ ನಡೆಯಬೇಕು ಎಂದು ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗಲೂ ಹೇಳಿದೆ, ಸ್ಪೀಕರ್ ಚುನಾವಣೆಯಾದಾಗಲೂ ನಾನು ಈ ಮಾತುಗಳನ್ನು ಹೇಳಿದ್ದೇನೆ. 60 ದಿವಸಗಳು ಅಧಿವೇಶನ

ನಡೆಯಬೇಕೆಂದು ನಾವೇ ಕಟ್ಟಳೆ ಹಾಕಿಕೊಂಡಿದ್ದೇವೆ. ಹಾಗೆ 60 ದಿವಸಗಳ ಅಧಿವೇಶನ ಕರೆಯದೇ ಇದ್ದಾಗ, ಮುಖ್ಯಮಂತ್ರಿಗಳು, ಸ್ಪೀಕರ್‌ರವರನ್ನು ಒಳಗೊಂಡಂತೆ ಅದಕ್ಕೆ ಪನಿಷ್‌ಮೆಂಟ್ ಇದೆಯೇ? ಮುಖ್ಯಮಂತ್ರಿಗಳು ಮತ್ತು ಪಾರ್ಲಿಮೆಂಟ್ ಸಚಿವರು ಸಮಾಲೋಚನೆ ಮಾಡಿ 60 ದಿವಸಗಳು ನಡೆಯುವ ಹಾಗೆ ಅಧಿವೇಶನ ಕರೆಯಬೇಕು. Calender of events announce ಮಾಡಿ ಎಂದು ನಾನು ಹೇಳಿದೆ. ಆರು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ವಾರ್ಡ್ ಸಭೆ, ಗ್ರಾಮಸಭೆಗಳ Calender of events announce ಮಾಡಬೇಕು, ಡೇಟ್ ನಿಗದಿ ಮಾಡಬೇಕು ಹೀಗೆ ಈ ವಿಧೇಯಕದಲ್ಲಿ ನೀವು ಎಲ್ಲ ರೀತಿಯ restrictions ಅವರಿಗೆ ಹಾಕುತ್ತಿದ್ದೀರಿ. ಆದರೆ ರಾಜ್ಯದ highest elected body ಆದ ನಾವು 60 ದಿವಸಗಳ ಅಧಿವೇಶನವನ್ನು ಕರೆಯಬೇಕೆಂದು ಕಾನೂನು ಮಾಡಿಕೊಂಡಿದ್ದೇವೆ. ಹಾಗೆ 60 ದಿವಸಗಳ ಅಧಿವೇಶನವನ್ನು ಕರೆಯದೇ ಇದ್ದಾಗ ನಮಗೆ ಏನು ಪನಿಷ್‌ಮೆಂಟ್ ಇದೆ? ನಮಗಿಲ್ಲದಂಥ ಪನಿಷ್‌ಮೆಂಟ್ ಅವರಿಗೆ ಏಕೆ? ಹಾಗಾದರೆ ಎಂ.ಎಲ್.ಎ.ಗಳನ್ನು, ಮಂತ್ರಿಗಳನ್ನು, ಮುಖ್ಯಮಂತ್ರಿಗಳನ್ನು disqualify ಮಾಡುವಂಥ ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ. ನಮಗಿಲ್ಲದಂಥ ಪನಿಷ್‌ಮೆಂಟನ್ನು ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಏಕೆ ಕೊಡುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ನೀವು ಇದನ್ನು entertain ಮಾಡಲು ಹೋಗಬೇಡಿ. ಇದು ಬಹಳ simple ಆಗಿದೆ, ಇದು ಬಹಳ ಸಣ್ಣದಾದಂಥ ಒಂದು ತಿದ್ದುಪಡಿ ಎಂದು ಮಾನ್ಯ ಹೆಚ್.ಕೆ.ಪಾಟೀಲ್‌ರವರು ಹೇಳಿದರು. ನಿನ್ನೆ ಸಾಯಂಕಾಲ ಈ ತಿದ್ದುಪಡಿಯ ವಿಧೇಯಕಕ್ಕೆ ಒಪ್ಪಿಗೆ ಕೊಡಿ ಎಂದು ಅವರು ಹೊರಟಿದ್ದರು. ಆದರೆ ಇದರ consequence ಬಹಳ ಕೆಟ್ಟದ್ದಿದೆ. ಅಲ್ಲಿರುವಂಥ ಪಟ್ಟಭದ್ರ ಹಿತಾಸಕ್ತಿಗಳು ಇನ್ನೂ ಬಿಗಿಯಾಗುತ್ತವೆ. Disqualify ಮಾಡುತ್ತೇವೆ, ನಿನ್ನು membership ನಿಂದ ತೆಗೆದು ಹಾಕುತ್ತೇವೆ ಎಂದು ಹೆದರಿಸಿ ಆ ಒಂದು ಇಡೀ ವ್ಯವಸ್ಥೆಯನ್ನು ಅವರ ಕಪಿಮುಷ್ಟಿಯಲ್ಲಿ ಇನ್ನೂ ಬಲಯುತವಾಗಿ ಹಿಡಿಯುತ್ತಾರೆ. ಅದು ನಿಮ್ಮ ಸರ್ಕಾರವಿರಬಹುದು, ನಮ್ಮ ಸರ್ಕಾರವಿರಬಹುದು, ಮುಂದೆ ಬರುವಂಥ ಸರ್ಕಾರಗಳು ಗ್ರಾಮ ಪಂಚಾಯಿತಿಯ ಸದಸ್ಯರನ್ನು ತಮ್ಮ ರಾಜಕೀಯ ದಾಳವನ್ನಾಗಿ ಬಳಸಲು ಇದು

ಅನುಕೂಲತೆಯನ್ನು ಮಾಡಿಕೊಡುತ್ತದೆ. ಅವರು ಏನೋ ಒಂದು ಮಿಸ್ಟೇಕ್ ಮಾಡಿದಾಗ, ನಿನ್ನನ್ನು disqualify ಎನ್ನುವ ಕಾರಣವನ್ನು ಹೇಳಿ, ಅವರನ್ನು ತಮ್ಮ ಬಿಗಿಮುಷ್ಟಿಯಲ್ಲಿ ಹಿಡಿದುಕೊಳ್ಳುವಂಥ ಪ್ರಯತ್ನಗಳು ನಡೆಯುತ್ತವೆ. ಯಾವುದೇ ದೂರದೃಷ್ಟಿ ಇಲ್ಲದಂಥ ಒಂದು ವಿಧೇಯಕವನ್ನು ತೆಗೆದುಕೊಂಡು ಬಂದಿದ್ದೀರಿ. ಇದರ consequenceಗಳನ್ನು ನೀವು ನೋಡಿಲ್ಲ. ಬಹುಶಃ ಯಾವ ರಾಜ್ಯದಲ್ಲೂ ಈ ರೀತಿ disqualify ಮಾಡುವಂಥದ್ದು ಇಲ್ಲ. ದುರ್ನಡತೆ ಅಥವಾ ಮತ್ತೊಂದು ಕಾರಣದ ಮೇಲೆ disqualify ಮಾಡುವಂಥ provision ಇದೆ. ಆದರೆ ಸಭೆ ಕರೆಯಲಿಲ್ಲ ಎನ್ನುವ ಒಂದು ಜವಾಬ್ದಾರಿಯನ್ನು ನಿಭಾಯಿಸಲಿಲ್ಲ ಎನ್ನುವ ಕಾರಣಕ್ಕಾಗಿ ಈ ರೀತಿ disqualify ಮಾಡುತ್ತೇವೆ ಎನ್ನುವುದು ಸರಿಯಲ್ಲ. ಅಧಿಕಾರಿಗಳಾದ ಪಿ.ಡಿ.ಓ.ಗಳು, ಸೆಕ್ರೆಟರಿಗಳ ಮೇಲೆ ಕ್ರಮವಿಲ್ಲ. ಮೀಟಿಂಗ್ ಕರೆಯದಂಥ ಪಿ.ಡಿ.ಓ.ಮತ್ತು ಸೆಕ್ರೆಟರಿ ಮೇಲೆ ಏನು ಪನಿಷ್‌ಮೆಂಟ್ ಇದೆ? ಅವರ ಮೇಲೆ ನೀವು ಏನು ಅಧಿಕಾರವನ್ನು ಚಲಾವಣೆ ಮಾಡುತ್ತೀರಿ? ಅವರಿಗೆ ಏನೂ ಪನಿಷ್‌ಮೆಂಟ್ ಇಲ್ಲ. ಆದರೆ ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಮಾತ್ರ ಪನಿಷ್‌ಮೆಂಟ್ ಇದೆ. ಹಾಗಾಗಿ ಇದು ಅಧಿಕಾರಿ ವಿಕೇಂದ್ರೀಕರಣ ಮತ್ತು ಬೇಲೂರು ಘೋಷಣೆಗಳಿಗೆ ದೊಡ್ಡದಾದಂಥ ಒಂದು ಹೊಡೆತ ಕೊಡುತ್ತದೆ. ಗ್ರಾಮ ಪಂಚಾಯಿತಿಯ ಸದಸ್ಯರ ಅಧಿಕಾರ ಮೊಟಕುಗೊಳಿಸುವಂಥ ಒಂದು ಪ್ರಯತ್ನ ಇದಾಗಿದೆ, ಇದರಲ್ಲಿ ಒಂದು ರಾಜಕೀಯ ಹುನ್ನಾರವಿದೆ, ಇಡೀ ವ್ಯವಸ್ಥೆಯನ್ನು ನಿಮ್ಮ ಬಿಗಿ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳುವಂಥ ಒಂದು ಹುನ್ನಾರವಿದೆ. ಚಲುವರಾಯಸ್ವಾಮಿಯವರು ಹೇಳಿದ ಹಾಗೆ ಇದರ ಬಗ್ಗೆ ಸಮಗ್ರವಾದಂಥ ಚಿಂತನೆ ಮಾಡಿ. ಆ ವ್ಯವಸ್ಥೆ ಸರಿಯಾಗಬೇಕು. ಆ ವ್ಯವಸ್ಥೆಯನ್ನು ಸರಿ ಮಾಡಲು ಏನು ಮಾಡಬೇಕೆನ್ನುವ ಬಗ್ಗೆ ಚಿಂತನೆ ಮಾಡಿ. ನಾನು ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿದ್ದಾಗ Direct election ಬಗ್ಗೆಯೂ ನಾವು ವಿಚಾರ ಮಾಡಿದೆವು, ಹಿಂದೆ ಈ ಬಗ್ಗೆ ಇಲ್ಲಿ debate ಆಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರ ಅವಧಿ 20 ತಿಂಗಳು ಇದ್ದುದನ್ನು 10 ತಿಂಗಳಿಗೆ ಇಳಿಸಲು No confidence motion ತರುವುದು, ಆ ಸದಸ್ಯರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವುದು ಹೀಗೆ ಅಲ್ಲಿ ಆಡಳಿತ ಮಾಡಲು ಸಾಧ್ಯವಿಲ್ಲದಂಥ

ಒಂದು ವ್ಯವಸ್ಥೆಯಿತ್ತು. ಅದನ್ನು ಬದಲಾವಣೆ ಮಾಡಲು ಚಿಂತನೆಯನ್ನು ಮಾಡಬೇಕು. ಹಿಂದೆ ದಿ.ಎಂ.ಪಿ.ಪ್ರಕಾಶ್‌ರವರು ಗ್ರಾಮೀಣಾಭಿವೃದ್ಧಿ ಮಂತ್ರಿ- ಗಳಾಗಿದ್ದಾಗ ಕಾಯಿದೆಗೆ ಒಂದು ತಿದ್ದುಪಡಿ ತಂದರು. ಅದೇನೆಂದರೆ, ಗ್ರಾಮ ಪಂಚಾಯಿತಿಗೆ ನಿಲ್ಲುವಂಥ ಅಭ್ಯರ್ಥಿಗಳ ಮನೆಯ ಹತ್ತಿರ ಶೌಚಾಲಯ ಇಲ್ಲದಿದ್ದರೆ ಅವರು ಎಲೆಕ್ಷನ್‌ಗೆ ನಿಲ್ಲಲು ಆಗುವುದಿಲ್ಲ ಎನ್ನುವಂಥ ಒಂದು provision ತೆಗೆದುಕೊಂಡು ಬಂದರು. ಮುಂದೆ ಅದು challenge ಆಗಿ ಹೈಕೋರ್ಟ್‌ಗೆ ಹೋಗಿ ಅಲ್ಲಿ quash ಆಯಿತು. ಬೇಕಾದರೆ ಆ ರೀತಿಯ reform ತೆಗೆದುಕೊಂಡು ಬನ್ನಿ. ಅದನ್ನು ನಾನು welcome ಮಾಡುತ್ತೇನೆ. ಆ ರೀತಿ ಈ ವ್ಯವಸ್ಥೆಯನ್ನು ಇನ್ನೂ ಗಟ್ಟಿ ಮಾಡುವಂಥ, ಶೌಚಾಲಯ, ಈ ರೀತಿಯ ಮತ್ತೊಂದು ಮೂಲಭೂತ ವ್ಯವಸ್ಥೆಗಳನ್ನು ಕೊಡುವ ಬಗ್ಗೆ ತೆಗೆದುಕೊಂಡು ಬನ್ನಿ. ಆದರೆ, ಒಂದು ಸಭೆ ಕರೆಯದಿದ್ದರೆ ಪನಿಷ್‌ಮೆಂಟ್ ಕೊಡುತ್ತೇವೆ ಎಂದು ಹೇಳಿದರೆ ಒಪ್ಪಲಾಗದು. ಆದರೆ ಕೇವಲ ಒಂದು ಸಭೆಯನ್ನು ಕರೆಯದೇ ಇದ್ದರೆ ಅವರನ್ನು disqualify ಮಾಡುವಂಥ ಈ ಶಾಸನ ಒಂದು ಕರಾಳವಾದಂಥ ಶಾಸನ ಎಂದು ನಾನು ಹೇಳುತ್ತಿದ್ದೇನೆ. ದಯವಿಟ್ಟು ಇದನ್ನು ನೀವು ವಾಪಸ್ಸು ತೆಗದುಕೊಳ್ಳಿ, ಇದರ ಬಗ್ಗೆ ಚಿಂತನೆ ಮಾಡಿ, ಚರ್ಚೆ ಮಾಡಿ. ಇದಕ್ಕೆ ಇನ್ನೂ ಏನು reform ಮಾಡಬಹುದೆನ್ನುವ ಬಗ್ಗೆ ಚಿಂತನೆ ಮಾಡಬೇಕು, ಈ ಬಗ್ಗೆ ಮಾನ್ಯ ಹೆಚ್.ಕೆ.ಪಾಟೀಲರು ಆಲೋಚನೆಯನ್ನು ಮಾಡಬೇಕು ಎನ್ನುವ ಮಾತನ್ನು ಹೇಳಿ, ಇದು ಸರಿಯಾದ ವಿಧೇಯಕವಲ್ಲ, ಹಾಗಾಗಿ ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇದರ ಸಾಧಕ-ಬಾಧಕಗಳೇನು ಎನ್ನುವ ಚಿಂತನೆಯನ್ನು ಮಾಡದೇ, ಇಷ್ಟು ತರಾತುರಿಯಲ್ಲಿ ಈ ರೀತಿಯ ಒಂದು ವಿಧೇಯಕವನ್ನು ತರಬಹುದು ಎನ್ನುವ ನಿರೀಕ್ಷೆಯನ್ನು ನಾನು ಮಾಡಿರಲಿಲ್ಲ. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2013, 2013ನೇ ಸಾಲಿನ ವಿಧಾನಸಭೆಯ ವಿಧೇಯಕ ಸಂಖ್ಯೆ 3ರ ಮೂಲಕ ತಾವೇನು ತಿದ್ದುಪಡಿ ತರಲು ಹೊರಟಿದ್ದೀರಿ, ಅದರಲ್ಲಿ ಉದ್ದೇಶ ಮತ್ತು ಕಾರಣಗಳನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಕರ್ತವ್ಯಲೋಪವೆಸಗಿ ಪಂಚಾಯತ್‌ರಾಜ್ ವ್ಯವಸ್ಥೆಗೆ

ಅಡ್ಡಿಯಾಗುವಂಥ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಇಲ್ಲವೇ ಸದಸ್ಯರನ್ನು ಅನರ್ಹ ಗೊಳಿಸುವುದಕ್ಕೂ ಕೂಡ ಸೂಕ್ತವಾದ ತಿದ್ದುಪಡಿಯನ್ನು ತರುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ. ನಾನು ತಮಗೆ ಹೇಳುವುದು ಇಷ್ಟೇ, ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ತುಂಬ ಯಶಸ್ವಿಯಾಗಿ ಆಗಬೇಕಾಗಿದೆ. ಮುಂದೆ ಗ್ರಾಮ ಸಭೆಗಳು ವ್ಯವಸ್ಥಿತವಾಗಿ ನಡೆಯಲು ಪ್ರಾರಂಭವಾದ ಮೇಲೆ ಮಂತ್ರಿಗಳೋ, ಶಾಸಕರೋ ಅಲ್ಲಿಗೆ ಹೋಗಿ ಕುಳಿತಾಗ, ಆ ಗ್ರಾಮಸಭೆಗಳನ್ನು ಎದುರಿಸುವುದು ಎಷ್ಟು ಕಷ್ಟವಿದೆ, ಆ ಜನರನ್ನು ಎದುರಿಸುವುದು ಎಷ್ಟು ಕಷ್ಟವಿದೆ ಎನ್ನುವುದು ನಮಗೂ. ನಿಮಗೂ ಅನುಭವಕ್ಕೆ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟು ಸುಲಭವಾಗಿ ಗ್ರಾಮಸಭೆಗಳು ಯಶಸ್ವಿಯಾಗುವುದಿಲ್ಲ. ಆದರೆ ನಾವು ಗ್ರಾಮ ಸಭೆಗಳನ್ನು ಮಾಡಬೇಕು. ಗ್ರಾಮ ಸಭೆಗಳನ್ನು ಮಾಡುವುದರಿಂದ ಆ ಗ್ರಾಮ ಪಂಚಾಯಿತಿಗಳಲ್ಲಿ ನಡೆಯುವಂಥ ಅವ್ಯವಹಾರಗಳು, ಸ್ವಜನ ಪಕ್ಷಪಾತ, ಸ್ವಾರ್ಥಕ್ಕಾಗಿ ಅಧಿಕಾರ ದುರುಪಯೋಗ ಮಾಡಿಕೊಳ್ಳುವಂಥದ್ದು, ಸರ್ಕಾರದ ಅನೇಕ ಯೋಜನೆಗಳನ್ನು ತಮಗೆ ಬೇಕಾದವರಿಗೆ ಕೊಟ್ಟು, ಬಡವರಿಗೆ ಅದು ತಲುಪದ ಹಾಗೆ ಮಾಡುವುದು ಇವೆಲ್ಲವೂ ಗ್ರಾಮ ಸಭೆಗಳಲ್ಲಿ ಚರ್ಚೆಗೆ ಬರುವುದರಿಂದ, ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಸದಸ್ಯ, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷ, ಸದಸ್ಯ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಲು ಈ ಬಿಗಿ ಕ್ರಮಗಳು ತುಂಬ ಲಾಭವಾಗುತ್ತವೆ. ಆದರೆ, disqualification ಅಲ್ಲ. ಇದು ಕಠೋರವಾದ ಶಾಸನ ಆಗುತ್ತದೆ. ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಿ. ಬಜೆಟ್ ಅನ್ನು ನೀವು ಹೇಗೂ ಹೊಸದಾಗಿ ಮಂಡನೆ ಮಾಡುತ್ತಿದ್ದೀರಿ. ಆ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಬಗ್ಗೆ ಎರಡು ದಿವಸ ಸುಸೂತ್ರವಾಗಿ ಎಲ್ಲಾ ಸಾಧಕ ಬಾಧಕಗಳನ್ನು, ಇದುವರೆಗೆ ನಮ್ಮ ಶಾಸಕರಿಗೆ ಬಂದಿರುವಂಥ ಅನುಭವಗಳನ್ನು ಚರ್ಚೆ ಮಾಡೋಣ. ಚರ್ಚೆ ಮಾಡಿದ ಮೇಲೆ ನೀವು ಸಮಗ್ರವಾಗಿ ರಾಜ್ಯಪಾಲರಿಂದ ಕರ್ತವ್ಯಲೋಪ ಎಸಗಿ ಪಂಚಾಯತ್‌ರಾಜ್ ವ್ಯವಸ್ಥೆಗೆ ಅಡ್ಡಿಯಾಗುವಂಥ ಗ್ರಾಮ ಪಂಚಾಯತ್ ಅಧ್ಯಕ್ಷರುಗಳನ್ನು. ಸದಸ್ಯರುಗಳನ್ನು ಅನರ್ಹಗೊಳಿಸುವುದು ಏನಿದೆ, ಇದನ್ನು ಸೇರಿಸಿ ಎಲ್ಲವನ್ನೂ ಅಲ್ಲಿ ತೆಗೆದುಕೊಂಡು ಬನ್ನಿ. ಅದರ ಸಾಧಕಬಾಧಕಗಳು ಏನು ಎಂದು ಚರ್ಚೆ ಮಾಡೋಣ. ಏಕೆಂದರೆ, ಸಾಮಾನ್ಯ ಒಬ್ಬ ವ್ಯಕ್ತಿ ಗ್ರಾಮೀಣ

ಪ್ರದೇಶದಲ್ಲಿ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯರ ಸಭೆ ಕರೆಯಲಿಲ್ಲವೆಂದು disqualify ಮಾಡುತ್ತೇವೆ ಎನ್ನುವುದು ಯಾವ ರೀತಿಯಾಗಿ ಅಧಿಕಾರ ವಿಕೇಂದ್ರೀಕರಣದ ದುರುಪಯೋಗವಾಗಬಹುದು, ಅಲ್ಲಿ ಬಲಾಢ್ಯರು ಇರುತ್ತಾರೆ ಅವರು ಯಾವುದೋ ರೀತಿಯಲ್ಲಿ ಇದನ್ನು ಯಾರೋ ಒಬ್ಬರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ದುರುಪಯೋಗ ಮಾಡಿಕೊಳ್ಳಬಹುದೆನ್ನುವುದು ನಿಮಗೆ ತಿಳಿದರುವ ವಿಷಯವಾಗಿದ್ದು, ಇದನ್ನು ನಾನು ನಿಮಗೆ ಹೇಳಬೇಕಾದ ಅಗತ್ಯವಿಲ್ಲ. ತರಾತುರಿಯಲ್ಲಿ ತಂದಿರುವ ಈ ಬಿಲ್‌ನ ಅಗತ್ಯವಿಲ್ಲ. ಇದನ್ನು ವಾಪಸ್ಸು ತೆಗೆದುಕೊಳ್ಳಿ. ಬಜೆಟ್ ಮಂಡನೆಯನ್ನು ಹೊಸದಾಗಿ ಮಾಡಿದ ಮೇಲೆ ಗ್ರಾಮೀಣಾಭಿವೃದ್ಧಿ ಬಗ್ಗೆ ಸಾಕಷ್ಟು ಚರ್ಚೆ ಆದ ಮೇಲೆ, ಅದರಲ್ಲೂ ನೀವು ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ, ಚರ್ಚೆ ಮಾಡಬೇಕಾಗುತ್ತದೆ, ಸಮಗ್ರವಾದ ಬಿಲ್ ತರುವಿರಂತೆ. ನೀವು disqualification ಎಲ್ಲಿಂದ ಮಾಡಬೇಕೆಂದರೆ ಮೇಲಿಂದ ಮಾಡಿಕೊಂಡು ಬನ್ನಿ. ಅದು ಬಿಟ್ಟು ನೀವು ಗ್ರಾಮ ಪಂಚಾಯಿತಿಯ ಒಬ್ಬ ಸಾಮಾನ್ಯ ಸದಸ್ಯ ಸಭೆ ಕರೆಯದಿದ್ದರೆ ಬಹುಶಃ ಅದನ್ನೇ ಒಂದು ನೆಪ ಮಾಡಿಕೊಂಡು ಅವರನ್ನು disqualify ಮಾಡಿಸುವುದಕ್ಕೆ ಅಲ್ಲಿ ಬಲಾಢ್ಯರು ಅದರ ಪ್ರಯತ್ನ ಮಾಡಬಹುದು. ಆದ್ದರಿಂದ disqualification ಎನ್ನುವ ಶಬ್ದವನ್ನೇ ಉಪಯೋಗಿಸುವುದು ಸರಿಯಲ್ಲ. ಆದರೆ, ಇದನ್ನು ವ್ಯವಸ್ಥಿತವಾಗಿ ಕರೆಯಬೇಕೆನ್ನುವಂಥ ಎಲ್ಲಾ ಜವಾಬ್ದಾರಿಯನ್ನು ಅಧಿಕಾರಿ ಮೇಲೆ ಹಾಕಿ. ಸಭೆಯನ್ನು ಕರೆಯುವುದು ಗ್ರಾಮ ಪಂಚಾಯಿತಿ ಅಧ್ಯಕ್ಷ ಅಲ್ಲ, ಸದಸ್ಯ ಅಲ್ಲ, ಅಧಿಕಾರಿ ಕರೆಯಬೇಕು. ಅಧಿಕಾರಿಗೆ ಜವಾಬ್ದಾರಿಯನ್ನು fix ಮಾಡಿ. ಅವನು ಆ ಕೆಲಸವನ್ನು ಕರ್ತವ್ಯವನ್ನು ಮಾಡದೇ ಇದ್ದರೆ 1,2,3 ಸಭೆ ಕರೆದ ಮೇಲೂ ಸಹ ಅಲ್ಲಿಗೆ ಸದಸ್ಯ ಅದಕ್ಕೆ cooperate ಮಾಡದಿದ್ದರೆ ಆಗ ಅವನ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಏನಾದರೂ ತರಬೇಕೇ ಹೊರತು ಈ ರೀತಿ ಅಲ್ಲ. ಸಭೆ ಕರೆಯುವ ಜವಾಬ್ದಾರಿ ಅಧಿಕಾರಿಯದೇ ಹೊರತು ಪಂಚಾಯತ್ ಸದಸ್ಯನಿಗಲ್ಲ. ಆದ್ದರಿಂದ ನೀವು ಇಲ್ಲೀಗ ಮಾಡಬೇಕಾಗಿರುವಂಥದ್ದು ಸಭೆಗಳನ್ನು ಕರೆದು ಗ್ರಾಮ ಸಭೆಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡೋಣ. ಅದರ ಅನುಭವಗಳ ಆಧಾರದ ಮೇಲೆ ಏನು ಬೇಕೋ ಒಂದು ಸೂಕ್ತವಾದ ತಿದ್ದುಪಡಿ ತರಬೇಕೇ ಹೊರತು ಏಕಾಏಕಿ

ಆ ಸದಸ್ಯನ ಸದಸ್ಯತ್ವವನ್ನು ರದ್ದುಮಾಡುತ್ತೇವೆನ್ನುವುದು, ಸದಸ್ಯರನ್ನು ಅನರ್ಹಗೊಳಿಸುತ್ತೇವೆನ್ನುವುದು ಇದೊಂದು ಕರಾಳ ಶಾಸನವಾಗುತ್ತದೆ. ಬಹುಶಃ ನೀವು ಈ ಸಾಹಸಕ್ಕೆ ಕೈಹಾಕಬೇಡಿ. ದಯಮಾಡಿ ಇದು prestige ಎಂದು ತಿಳಿದುಕೊಳ್ಳದೇ ಇದನ್ನು ವಾಪಸ್ಸು ತೆಗೆದುಕೊಳ್ಳಿ. ನಾಳೆ ಬಜೆಟ್‌ನಲ್ಲಿ ಚರ್ಚೆಯಾಗಿ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಆದಮೇಲೆ ಸಮಗ್ರವಾಗಿ ಎಲ್ಲರ ಅನುಭವ ನೋಡಿಕೊಂಡು ಇದನ್ನು ತರಬೇಕೇ ಹೊರತು ಇದನ್ನು ಚರ್ಚೆಗೂ ಅವಕಾಶ ಕೊಡದೇ ತರುವುದು ಬೇಡ. ಇದನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು, ಮುಂದೆ ಸಮಗ್ರವಾಗಿ ಚಿಂತನೆ ಮಾಡಿ ಸಮಗ್ರವಾದ ಬಿಲ್ ಅನ್ನು ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರು ಉತ್ಸಾಹಭರಿತರಾಗಿ ಒಂದು ಹೊಸ ಕ್ರಾಂತಿ ಮಾಡಬೇಕೆನ್ನುವ ನಿಟ್ಟಿನಲ್ಲಿ ಅವರ ಆಲೋಚನೆಗೆ ನನ್ನ ಅಭಿನಂದನೆ ಇದೆ. ಆದರೆ, "ಆತುರಗಾರನಿಗೆ ಬುದ್ಧಿಮಟ್ಟ" ಎನ್ನುವ ಒಂದು ಗಾದೆ ಮಾತು ಇದೆ. ಇದು ಮೊದಲನೇ ಅಧಿವೇಶನ. ಇಲ್ಲಿ ಸಮಗ್ರ ಚರ್ಚೆ ಚಿಂತನೆ ಆಗಬೇಕು. ಇದರೊಳಗಡೆ Ward ಸಭೆಗೆ joint responsibility ಅನ್ನು ಸಹ ಇವರು fix ಮಾಡಿಲ್ಲ. ಅಧ್ಯಕ್ಷ, ಸದಸ್ಯ ಜೊತೆಗೆ PDO joint responsibility ಎಂದು fix ಮಾಡಿದ್ದರೆ ಅಧಿಕಾರಿಗಳ ಹೊಣೆಗಾರಿಕೆಯೂ ಇರುತ್ತಿತ್ತು. ಈಗ ಗ್ರಾಮ ಪಂಚಾಯಿತಿಯ ಬಹಳಷ್ಟು ಸದಸ್ಯರಲ್ಲಿ ವಿದ್ಯಾವಂತರಲ್ಲದವರು ಬಹಳಷ್ಟು ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದಾರೆ. ಅವರಿಗೆ date ನೆನಪು ಇರುವುದಿಲ್ಲ, ವಾರ ನೆನಪು ಇರುವುದಿಲ್ಲ. ಕೂಲಿ ಮಾಡಿಕೊಂಡು reservation category ಯಲ್ಲಿ ಅವರು ಗ್ರಾಮ ಪಂಚಾಯಿತಿ ಸದಸ್ಯರಾಗಿರುತ್ತಾರೆ. ಯಾವಾಗ ವಾರ್ಡ್ ಸಭೆ ಕರೆಯಬೇಕೆನ್ನುವುದು ಅವನಿಗೆ ಗೊತ್ತಿರುವುದಿಲ್ಲ. 6 ತಿಂಗಳು late ಆಯಿತೋ, ಒಂದು ವರ್ಷ ಆಯಿತೋ ಎನ್ನುವುದೂ ಗೊತ್ತಿರುವುದಿಲ್ಲ. ಆ ಪರಿಸ್ಥಿತಿಯಲ್ಲಿ ಇವರು ಇದರಲ್ಲಿ joint responsibility ಅನ್ನೂ fix ಮಾಡಿಲ್ಲ. ಹಾಗಾದರೆ, ಇವರಿಗೆ ಸಮಗ್ರವಾಗಿ ಗ್ರಾಮ ಸಭೆ ಆಗಬೇಕೆನ್ನುವುದಾದರೆ joint responsibility fix ಮಾಡಲಿ. PDO ಅನ್ನು fix ಮಾಡಲಿ, Secretary ಅನ್ನು fix ಮಾಡಲಿ, ಆಗ

ಗ್ರಾಮಸಭೆ ಚೆನ್ನಾಗಿ ಆಗುತ್ತದೆ ಎಂದು ಹೇಳಬಹುದು. ಇದರ ಜೊತೆಗೆ ಕೇವಲ ಗ್ರಾಮಸಭೆ ಒಂದು ಸುಧಾರಣೆ ಆಗುವುದರಿಂದ, ಚರ್ಚೆ ಆಗುವುದರಿಂದ ಇಡೀ ಪಂಚಾಯಿತಿ ಸಶಕ್ತ ಆಗಿಬಿಡುತ್ತದೆ, ಜನರ ಆಶೋತ್ತರವನ್ನು ಈಡೇರಿಸಿಬಿಡುತ್ತದೆ ಎಂದಲ್ಲ. ಅದಕ್ಕೆ ಸಮಗ್ರ ಚರ್ಚೆ, ಚಿಂತನೆ ಆಗಬೇಕು. ಗ್ರಾಮ ಪಂಚಾಯಿತಿಯನ್ನು ಸಶಕ್ತಗೊಳಿಸುವುದು ಹೇಗೆ? ನಮ್ಮ ಜಿಲ್ಲೆಯಲ್ಲಿ 14 ಪಂಚಾಯಿತಿಗೊಬ್ಬ ಇಂಜಿನಿಯರ್ ಇದ್ದಾನೆ. ಅವನು MMR ಮಾಡುವ ಹಾಗಿಲ್ಲ, ಬಿಲ್ ಬರೆಯುವುದಕ್ಕೂ ಆಗುವುದಿಲ್ಲ, ಈ ಪರಿಸ್ಥಿತಿ ಇದೆ. ನಾವು ಅದನ್ನೂ ಸಶಕ್ತಗೊಳಿಸುವುದರ ಬಗ್ಗೆಯೂ ಯೋಚನೆ ಮಾಡಬೇಕಾಗುತ್ತದೆ. ಇದೆಲ್ಲವನ್ನೂ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಚಿಂತನೆ ಮಾಡುವುದಕ್ಕೆ ಅವರು ಕೆಲವು ತಜ್ಞರ ಜೊತೆಯಲ್ಲಿ, ಹಿರಿಯರ ಜೊತೆಯಲ್ಲಿ ಚರ್ಚೆ ನಡೆಸಿ ಒಂದು ಸಮಗ್ರ ತಿದ್ದುಪಡಿ ಬಿಲ್ ತರಲಿ. ದುರ್ನಡತೆ ಆದವರನ್ನೂ ಕೂಡ disqualify ಮಾಡಬಹುದು.

ಅಧ್ಯಕ್ಷರು : ಒಂದು ನಿಮಿಷ. ಮಾನ್ಯ ಸಚಿವರೆ, Clause-1 ನಲ್ಲಿ

"1(A) In the case of Grama Panchayat member responsible to Convene the meeting, fails to convene the meeting of the Ward Sabha, ."

ಎಂದು ಇದೆ. Member ಕರೆಯಬೇಕೆಂದು ಇದು ಈಗ ಇದೆಯೇ? Member ಕರೆಯುವುದಕ್ಕೆ ಯಾವ provision ಇದೆ?

ಶ್ರೀ ಹೆಚ್.ಕೆ.ಪಾಟೀಲ್ : ನಮ್ಮ ಜಗದೀಶ್ ಶೆಟ್ಟರ್‌ರವರು ನಮ್ಮ ಬಿಲ್ ಅನ್ನು ಓದಿದ ಹಾಗೆ ಕಾಣಿಸುತ್ತಿಲ್ಲ. ಏಕೆಂದರೆ, ದುರ್ನಡತೆ ಬಗ್ಗೆ ಇದರಲ್ಲಿ ಎಲ್ಲೂ ಪ್ರಸ್ತಾಪವಿಲ್ಲ. ದುರ್ನಡತೆ ಬೇರೆ ಇದೆ. ತಾವು ಯಾವುದರ ಮೇಲೆ ಅವಲಂಬಿತರಾಗಿದ್ದೀರಿ ಎಂದರೆ...

ಶ್ರೀ ಕೆ.ಜಿ.ಬೋಪಯ್ಯ : Section 3 ward sabha ಹೇಗಿರಬೇಕು, ಹೇಗೆ ಕರೆಯಬೇಕು, ಯಾರು ಕರೆಯಬೇಕೆನ್ನುವುದು silent ಇದೆ. ಯಾರು attend ಆಗಬೇಕೆನ್ನುವುದೆಲ್ಲ ಇದೆ. ಅದೆಲ್ಲವನ್ನೂ ನೀವು ಆ ಗ್ರಾಮಸಭೆಗೆ ಅಧ್ಯಕ್ಷನಿಗೆ, ಸದಸ್ಯನಿಗೆ fix ಮಾಡಿಬಿಟ್ಟರೆ ಆಗುತ್ತದೆಯೇ? Nodal officer ಇದ್ದಾರೆ. ಅವನು ಬರುವುದೇ ಇಲ್ಲ, What is the action against

him? ಗ್ರಾಮ ಸಭೆಗೆ Act ನಲ್ಲಿಯೇ Provision ಇದೆಯಲ್ಲ? ಅದು ಹೇಗೆ ಇರಬೇಕು, ಎಷ್ಟು ಇರಬೇಕು, Minimum Member ಎಷ್ಟಿರಬೇಕು, ಅದು ಎಲ್ಲವೂ ಇದೆಯಲ್ಲ. ಅದೆಲ್ಲವನ್ನೂ ಮರೆತು ಅವರ ಮೇಲೆ fix ಮಾಡುತ್ತೀರಲ್ಲ, ಸರಿಯೇ?Section-3 ಅನ್ನು ನೀವು explain ಮಾಡಿ.

ಅಧ್ಯಕ್ಷರು : ನಾನು ಇದನ್ನೆಲ್ಲ ಸ್ವಲ್ಪ ನೋಡಿದ್ದೇನೆ. ಈಗ ಪಂಚಾಯಿತಿ ಮೆಂಬರ್ ವಾರ್ಡ್ ಸಭೆಯನ್ನು ಕರೆಯುವ ಅಧಿಕಾರ ಅವನಿಗೆ ಇದೆಯೇ? ಇದ್ದರೆ ನೋಡಿ.

ಶ್ರೀ ಜಗದೀಶ್ ಶೆಟ್ಟರ್ : ಆ provision silent ಇದೆ. ಅವರು ಆ ಗ್ರಾಮ ಸಭೆಯ, ವಾರ್ಡ್ ಸಭೆಯ ಅಧ್ಯಕ್ಷತೆ ವಹಿಸಬೇಕಷ್ಟೆ. ಅದರಲ್ಲಿ ಅಷ್ಟೇ ಇರುವುದು. ಸಭೆಯನ್ನು ಯಾರು ಕರೆಯಬೇಕೆನ್ನುವುದು silent ಇದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಈಗ ಆ ವ್ಯವಸ್ಥೆಯೇ ಇಲ್ಲ. ನಾವು ಗ್ರಾಮಸಭೆಗೆ attend ಮಾಡುತ್ತೇವಲ್ಲ, ಗ್ರಾಮಪಂಚಾಯತಿಗೆ ಹೋಗುತ್ತೇವಲ್ಲ, ಈ ಅಧಿಕಾರ ಗ್ರಾಮ ಪಂಚಾಯಿತಿ ಸದಸ್ಯರಿಗೆ ನಾವು ಇದುವರೆಗೂ ಕೊಟ್ಟೇ ಇಲ್ಲ, ಈ ರಾಜ್ಯದ ಇತಿಹಾಸದಲ್ಲಿ ಎಲ್ಲೋ ಆ ರೀತಿ ಈ ಸಭೆಗಳು ಆಗಿಯೂ ಇಲ್ಲ.

ಶ್ರೀ ಸಿ.ಟಿ. ರವಿ : ಸನ್ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ಇದರ ಸಮಗ್ರ ಚಿಂತನೆಯ ಅವಶ್ಯಕತೆ ಇದೆ. ಸಶಕ್ತಗೊಳಿಸುವ ಚಿಂತನೆಯ ಅವಶ್ಯಕತೆ ಇದೆ. ದಯವಿಟ್ಟು ಇದನ್ನು ಹಿಂತೆಗೆದುಕೊಳ್ಳಬೇಕು. ಚರ್ಚೆ ನಡೆಸಿ. ಸಮಗ್ರವಾಗಿ ಸಶಕ್ತಗೊಳಿಸುವುದಕ್ಕೆ ಬೇಕಾದಂಥ ಅಂಶಗಳನ್ನು ಮಂಡಿಸಲಿ, ನಾವೆಲ್ಲರೂ ಬೆಂಬಲವನ್ನು ಕೊಡುತ್ತೇವೆ.

ಶ್ರೀ ಹೆಚ್.ಕೆ.ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಬೋಪಯ್ಯನವರು ಒಂದು ಮಹತ್ವವಾದ ವಿಚಾರವನ್ನು ಕೇಳಿದರು. Ward ಸಭೆಯನ್ನು ಯಾರು ಕರೆಯಬೇಕು, Ward ಸಭೆಯನ್ನು ಕರೆಯಬೇಕೆನ್ನುವುದು ಇದೆಯೇ?

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : No, ಎಷ್ಟು per cent ಇರಬೇಕೆಂದು ಕೇಳಿದ್ದೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : Ward ಸಭೆಯನ್ನು ಸಮಾವೇಶಗೊಳಿಸುವುದು, ಗ್ರಾಮ ಪಂಚಾಯಿತಿಯ ಪ್ರತಿ ಸದಸ್ಯರು ತಾನು ಎಲ್ಲಿಂದ ಚುನಾಯಿತನಾಗಿದ್ದಾನೋ ಅಲ್ಲಿಯ Ward ಸಭೆಯ ಸಮಾವೇಶಿಕನಾಗಿರುತ್ತಾನೆ. ಇದು Ward ಸಭೆಯದು. ಗ್ರಾಮ ಸಭೆಗೆ ಬಂದರೆ,

ಅಧ್ಯಕ್ಷರು : ಸಮಾವೇಶಿಕನಾಗಿರುತ್ತಾನೆಂದರೆ ಅವನು ಸಭೆ ಕರೆಯಬೇಕೆಂದು ಅರ್ಥವೇ?

ಶ್ರೀ ಹೆಚ್.ಕೆ.ಪಾಟೀಲ್ : ಹಾಗೂ Ward ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾನೆ.

ಅಧ್ಯಕ್ಷರು : ಅದು ಸರಿ. Ward ಸಭೆಯನ್ನು ಕರೆಯುವವರು ಯಾರು?

ಶ್ರೀ ಹೆಚ್.ಕೆ.ಪಾಟೀಲ್ : ಸಿಂಧುವಾದ ಕಾರಣಗಳಿಗಾಗಿ ಒಂದು ವೇಳೆ ಆತ Ward ಸಭೆಯನ್ನು ಸಮಾವೇಶಗೊಳಿಸಲು ಅಧ್ಯಕ್ಷತೆ ವಹಿಸಲು ಅಸಾಧ್ಯವಾದರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಇತರೆ ಯಾವುದಾದರೂ ಗ್ರಾಮಪಂಚಾಯತಿಯ ಸದಸ್ಯರನ್ನು Ward ಸಭೆಯ ಸಮಾವೇಶಕರನ್ನಾಗಿ ಅಥವಾ...

ಅಧ್ಯಕ್ಷರು : ಅದು ಮುಂದೆ ಆಯಿತು. Ward ಸಭೆಯನ್ನು ಆ ವಾರ್ಡ್‌ನ ಪಂಚಾಯಿತಿ ಸದಸ್ಯ ಅಥವಾ ಸದಸ್ಯರು ಕರೆಯಬೇಕೆನ್ನುವುದು mandatory ಇದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಆ provision ಅನ್ನು ಓದಿಬಿಡುತ್ತೇನೆ. "Section 3 Ward sabha-subject to the general orders of the Government, the Ward sabha shall meet at least once in six months.The quorum of the meeting of the ward sabha shall be..." ಇದರಲ್ಲಿ ಅದು ಅಷ್ಟೆ ಇರುವುದು.'subject to such rules as may be prescribed exercising the following powers shall discharge..' ಇದಾಯಿತು. Next, 'to generate proposals and determine the

priority, to identify the most eligible, to verify...' Ward sabha ದಲ್ಲಿ ಏನು ಮಾಡಬೇಕೆಂದು ಇದೆ ಇನ್ನೊಂದು ಹೇಳುತ್ತೇನೆ. 'The procedure for convening and conducting the meetings of the ward Sabha shall be such as may be prescribed. Every meeting of the ward Sabha shall be presided over by the Member.' Preside ಎಂದಷ್ಟೆ ಇದೆ. ಆತ ಕರೆಯಬೇಕು ಎಂದು ಎಲ್ಲೂ ಇಲ್ಲ.

ಅಧ್ಯಕ್ಷರು : ಆಯಿತು ಬಿಡಿ, earlier,'as may be prescribed' ಎಂದು ಇದೆಯಲ್ಲಾ by rules ಏನಾದರೂ prescribe ಮಾಡಿದ್ದಾರೆಯೇ? ಅದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲ. ಅದನ್ನು ಮಾಡಿಲ್ಲ. ಸೈಲೆಂಟ್ ಇದೆ. ಗ್ರಾಮ ಪಂಚಾಯಿತಿಯ ಸದಸ್ಯನಾದ ಆತ ಅಧ್ಯಕ್ಷತೆ ವಹಿಸಬೇಕು, ಅಧ್ಯಕ್ಷ ಗ್ರಾಮ ಸಭೆಯ ಅಧ್ಯಕ್ಷತೆ ವಹಿಸಬೇಕು ಅಷ್ಟೇ. ಸಭೆ ಕರೆಯಬೇಕೆಂದು ಎಲ್ಲೂ ಇಲ್ಲವೇ ಇಲ್ಲ.

ಅಧ್ಯಕ್ಷರು : ಅದು ಸರಿ. Who should convene the meeting?

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನಾವು ಜನ ಸಂಪರ್ಕ ಸಭೆಗೆ ನಾವು ಅಧ್ಯಕ್ಷತೆ ವಹಿಸಬೇಕು. ಸಭೆ ಕರೆಯದಿದ್ದರೆ disqualify ಮಾಡಬೇಕೆಂದು ಎಲ್ಲೂ ಇಲ್ಲ. "ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ" ಬೇಡ. ಇದನ್ನು ವಾಪಸ್ಸು ತೆಗೆದುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ತಡೆಯಿರಿ. ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಸಮಯ ವ್ಯರ್ಥ ಮಾಡುವುದು ಬೇಡ. Select committeeಗೆ refer ಮಾಡಿ, study ಮಾಡಿ ವಾಪಸ್ಸು ಬರಲಿ. ಇದನ್ನು ತರಾತುರಿಯಲ್ಲಿ ಏಕೆ ಮಾಡುತ್ತೀರಿ? ಬೇಕಾದಷ್ಟು ಚರ್ಚೆ ಮಾಡುವುದು ಇದೆ. ಸಮಯವನ್ನು ಏಕೆ ಹಾಳು

ಮಾಡಬೇಕು? ದಯವಿಟ್ಟು ಇದನ್ನು Select committeeಗೆ refer ಮಾಡಿ. ತರಾತುರಿಯಲ್ಲಿ ತರುವಂಥದ್ದಲ್ಲ ಇದು.

ಶ್ರೀ ಜಗದೀಶ್ ಶೆಟ್ಟರ್ : ನಾನು ಇನ್ನೊಂದನ್ನು ಓದಿಬಿಡುತ್ತೇನೆ.

ಆಧ್ಯಕ್ಷರು : ಏನೆಂದು ಹೇಳಿ.

ಶ್ರೀ ಹೆಚ್.ಕೆ.ಪಾಟೀಲ್ : Clear ಆಗಲಿಲ್ಲವೆಂದರೆ, ರಾಜಕೀಯವನ್ನು ಮತ್ತೆ ಮಾತನಾಡೋಣ.

ಅಧ್ಯಕ್ಷರು : ರಾಜಕಾರಣ ಬೇಡ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, the quorum for the meeting of the Ward Sabha shall...

ಅಧ್ಯಕ್ಷರು : ಅದು ಬೇಡ.

ಶ್ರೀ ಜಗದೀಶ್ ಶೆಟ್ಟರ್ : ಮುಂದೆ, ಯಾರ್ಯಾರು ಇರಬೇಕೆಂದು ಇದೆ. ಅದು important. 'The quorum for the meeting of the Ward Sabha as far as may be...'

ಅಧ್ಯಕ್ಷರು : ಅದೂ ಬೇಡ. The basic question is, who has to convene a meeting of the Ward Sabha?

ಶ್ರೀ ಜಗದೀಶ್ ಶೆಟ್ಟರ್ : ಈ ಬಗ್ಗೆ Act silent ಇದೆ. ನಿಜವಾಗಲೂ ಹೇಳಬೇಕೆಂದರೆ Officer ಕರೆಯಬೇಕು.

MR.SPEAKER : Let him explain.

ಶ್ರೀ ಅರವಿಂದ ಲಿಂಬಾವಳಿ :- ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಜಗದೀಶ್ ಶೆಟ್ಟರ್‌ರವರಲ್ಲಿ ವಿನಂತಿ ಮಾಡುತ್ತೇನೆ, ತಾವು ದಯಮಾಡಿ ನನ್ನ Bill ನೋಡಿ. ಆ Billನಲ್ಲಿ ಏನಿದೆ ಎಂದು I will read for you, Sir. ವಾರ್ಡ್ ಸಭೆಗೆ ಸಂಬಂಧಿಸಿದಂಥದ್ದು ಮೂರನೇ ಪ್ರಕರಣ, ತಿದ್ದುಪಡಿ

"(1) ಸರ್ಕಾರದ ಸಾಮಾನ್ಯ ಆದೇಶಗಳಿಗೆ ಒಳಪಟ್ಟು, ವಾರ್ಡ್ ಸಭೆಯು ಆರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

ಸಂಪೂರ್ಣ ವರ್ಷಕ್ಕಾಗಿ ವಾರ್ಡ್ ಸಭೆಯ ದಿನಾಂಕಗಳ ದಿನಸೂಚಿಯನ್ನು ಪ್ರತಿಯೊಂದು ಹಣಕಾಸು ವರ್ಷದ ಪ್ರಾರಂಭದಲ್ಲಿ ಗ್ರಾಮ ಪಂಚಾಯತಿ ಸಭೆಯಲ್ಲಿ ಚರ್ಚಿಸತಕ್ಕದ್ದು, ತೀರ್ಮಾನಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು. ವಾರ್ಡ್ ಸಭೆಯ ಪ್ರತಿಯೊಂದು ಸಭೆಯನ್ನು ಗ್ರಾಮ ಸಭೆಯ ಸಭೆಗೆ ಕನಿಷ್ಠ ಏಳು ದಿನಗಳಿಗೆ ಮೊದಲು ನಡೆಸತಕ್ಕದ್ದು. ವಾರ್ಡ್‌ನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಗ್ರಾಮ ಪಂಚಾಯತಿಯ ಸದಸ್ಯನು ವಾರ್ಡ್ ಸಭೆಯ ಸಭೆಯನ್ನು ಕರೆಯತಕ್ಕದ್ದು."

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗ amendment ಮಾಡಿದ್ದಾರೆ. ಅದು ಮೂಲ ಕಾನೂನಿನಲ್ಲಿ ಇಲ್ಲ. (ಗೊಂದಲ) ಡಾ.ಶರಣ ಪ್ರಕಾಶ್ ಪಾಟೀಲ್‌ರೇ, ತಾವು ಇಲ್ಲಿ (ವಿರೋಧ ಪಕ್ಷದಲ್ಲಿ) ಕುಳಿತಾಗ ಜಾಗಟೆ ಹೊಡೆದು ಹೇಳುತ್ತಿದ್ದಿರಿ, ಬಹಳ ಎದ್ದು ನಿಂತು ಮಾತನಾಡುತ್ತಿದ್ದಿರಿ, ಪಂಚಾಯತಿ ಸದಸ್ಯರ ಹಕ್ಕು, ಅಧಿಕಾರ ಎಂದೆಲ್ಲ ಹೇಳುತ್ತಿದ್ದಿರಿ. ಇವತ್ತೇನಾಯಿತು ನಿಮಗೆ?

MR.SPEAKER : I am very sorry. In earlier clause if you have made a provision...

ಶ್ರೀ ಹೆಚ್.ಕೆ.ಪಾಟೀಲ್: ಇದಕ್ಕಿಂತಲೂ ಕ್ಲಿಯರ್ ಬೇಕೆ?

MR.SPEAKER : But one thing, let us honestly look into the provision. ಈಗ provision ಮಾಡಿದ್ದಾರೆ. Ward Member meeting ಕರೆಯಬೇಕೆಂದು ನೀವು provision ಮಾಡಿದರೆ, ಅಪಾಯ ಇದೆ.

(ಗೊಂದಲ)

ಅಧ್ಯಕ್ಷರು : ಹೀಗೆ ಮಾಡಿದರೆ ಹೇಗೆ? ಒಬ್ಬೊಬ್ಬರೇ ಮಾತನಾಡಿ. Please. Let us honestly apply our mind. ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಮಾತನಾಡಿದ್ದಕ್ಕೇ ಹೇಳಿದೆ. ನಾನು earlier provision ನೋಡಿರಲಿಲ್ಲ. ಆದರೆ ಈಗ provision ಮಾಡಿಕೊಂಡಿದ್ದಾರೆ. ಆ provision ಮಾಡಿದರೂ ಕೂಡ ಅಪಾಯ ಇದೆ ಎಂದು ನನ್ನ ಅಭಿಪ್ರಾಯ. (ಗೊಂದಲ) ರವಿಯವರು ಮಾತನಾಡುತ್ತಿದ್ದಾರೆ. ದತ್ತಾ ರವರೆ, ಸುಮ್ಮನಿರಿ

ಮಹಾರಾಯರೆ. ಅವರು ಮಾತನಾಡುತ್ತಿದ್ದಾರೆ. ಅವರದ್ದು ಆಗಲಿ. ದಯವಿಟ್ಟು ಬೇಗ ಪೂರೈಸಿ.

(ಗೊಂದಲ)

ಶ್ರೀ ಜಿ.ಟಿ.ದೇವೇಗೌಡ : ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಇರಬೇಕಾಗುತ್ತದೆ............

ಶ್ರೀ ಎಸ್.ಚಿಕ್ಕಮಾದು : ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಜಾರಿಗೆ ಬರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಅವರನ್ನು ಮಾತನಾಡಲು ಹೇಳೀದ್ದೇನೆ. ಅವರ ಹೆಸರನ್ನು ಕರೆದಿದ್ದೇನೆ. ಅವರು ಪೂರೈಸಲಿ. ಚಿಕ್ಕಮಾದುರವರೆ, ದೇವೇಗೌಡರೆ, ನೀವು ಹಿರಿಯ ಸದಸ್ಯರು ಇದ್ದೀರಿ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಚಿಕ್ಕಮಾದು : ಅವರದ್ದು ಮುಗಿಯಿತು ಎಂದು ಹೇಳಿದರು, ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಸಿ.ಟಿ.ರವಿ : ನಾನು ಇನ್ನೂ ಮುಗಿಸಿಲ್ಲ.

(ಗೊಂದಲ)

ಅಧ್ಯಕ್ಷರು : ಚಿಕ್ಕಮಾದುರವರೆ, ಅವರು ಮಾತನಾಡಿದ ಮೇಲೆ ನೀವು ಮಾತನಾಡಿ. ನೀವು ಮುಗಿಸಿ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಈಗ ನನ್ನದೊಂದು ವಿನಂತಿ ಇದೆ. ಈ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಪಿ.ಡಿ.ಓ.ರವರ ಮೇಲೆ responsibility fix ಮಾಡಬೇಕು. ಎರಡನೆಯದಾಗಿ, ಒಂದು ಗ್ರಾಮ ಸಭೆ ಎಂದರೆ ಇಂತಿಂಥ ಅಧಿಕಾರಿಗಳು ಬರಬೇಕೆಂದು ಇರುತ್ತದೆ. ಬಹಳ ಸಾರಿ ಶಾಸಕರು ಕರೆದ ಜನ ಸಂಪರ್ಕ ಸಭೆಗಳಿಗೆ ಅಧಿಕಾರಿಗಳು ಬರುವುದಿಲ್ಲ. ಕೆ.ಡಿ.ಪಿ. ಮೀಟಿಂಗ್‌ಗಳಿಗೆ ಕಾರಣ ಕೊಡದೆ ಅಧಿಕಾರಿಗಳು ಗೈರುಹಾಜರಾಗುತ್ತಾರೆ. ನಾವೀಗ "ಗುಬ್ಬಿ ಮೇಲೆ ಬ್ರಹ್ಮಾಸ್ತ್ರ" ಎಂಬಂತೆ ಒಬ್ಬ ಚುನಾಯಿತ ಪ್ರತಿನಿಧಿಯನ್ನು, ಪಂಚಾಯಿತಿ ಸದಸ್ಯನನ್ನು disqualify

ಮಾಡಬೇಕೆಂದು ಹೊರಟಿದ್ದೇವೆ. ಸಂಬಳ ತೆಗೆದುಕೊಂಡು, T.A./D.A. ತೆಗೆದುಕೊಂಡು ಅದರ ಮೇಲೆ ಮೇಲುಸಂಪಾದನೆ ಇಟ್ಟುಕೊಂಡಿರತಕ್ಕಂಥ ಅಧಿಕಾರಿಗಳು ಬರದೇ ಇದ್ದರೆ ಹೇಗೆ? ಅವರಿಗೆ ಗ್ರಾಮ ಸಭೆ ಬಗ್ಗೆ ಜವಾಬ್ದಾರಿ ಇಲ್ಲವೇ? ನಿಜವಾಗಿಯೂ, ಪ್ರಾಮಾಣಿಕವಾಗಿ ಕಾಳಜಿ ಇದೆ ಎನ್ನುವುದಾದರೆ, ಆ ಸಭೆಗೆ ಬರಬೇಕಾಗಿದ್ದ ಯಾವ ಅಧಿಕಾರಿ ಆ ಸಭೆಗೆ ಗೈರುಹಾಜರಾಗುತ್ತಾನೆ, ಅವನನ್ನೂ ವಜಾ ಮಾಡುವಂಥ ಕ್ರಮ ತೆಗೆದುಕೊಳ್ಳಲಿ. ಗ್ರಾಮ ಪಂಚಾಯತಿ ಸದಸ್ಯರನ್ನು ನಾವು disqualify ಮಾಡಬಹುದು ಎನ್ನುವುದಾದರೆ, ಅವನು ಒಬ್ಬ ಚುನಾಯಿತ ಪ್ರತಿನಿಧಿ, ಅವನು ಅಯೋಗ್ಯನಾದರೆ ಮುಂದಿನ ಚುನಾವಣೆಯಲ್ಲಿ ಜನ ಅವನನ್ನು ಸೋಲಿಸುತ್ತಾರೆ. ಅದೇ democracyಯಲ್ಲಿ ಇರುವುದು. ಆದರೆ, ಅಧಿಕಾರಿ ಅಯೋಗ್ಯನಾದರೂ ಅವನು 60 ವರ್ಷ, service ಇರುವವರೆಗೂ ಕೂಡ ಅವನನ್ನು ನಾವು ಸಹಿಸಿಕೊಳ್ಳಬೇಕು. ಅವನ ಮೇಲೂ ಜವಾಬ್ದಾರಿ fix ಮಾಡಿ. ಆ ರೀತಿಯ ಸಮಗ್ರ ತಿದ್ದುಪಡಿಯಾದರೆ, ಆಗ ಇದಕ್ಕೊಂದು ಅರ್ಥವಿರುತ್ತದೆ. ಇಲ್ಲದಿದ್ದರೆ "ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ" ಪ್ರಯೋಗ ಮಾಡಿದ ಹಾಗೆ ಆಗುತ್ತದೆ. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಮಾನ್ಯ ಚಿಕ್ಕಮಾದುರವರೆ, ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ appeal.

ಅಧ್ಯಕ್ಷರು : ನಾನು ಚಿಕ್ಕಮಾದುರವರನ್ನು ಕರೆದಿದ್ದೇನೆ, ಪಾಟೀಲ್‌ರವರೆ. ದಯವಿಟ್ಟು ನಂತರ ಮಾತನಾಡಿ.

ಶ್ರೀ ಎಸ್.ಚಿಕ್ಕಮಾದು : ಪಂಚಾಯಿತಿ ವ್ಯವಸ್ಥೆಯಲ್ಲಿ..

ಅಧ್ಯಕ್ಷರು : ಆಯಿತು, ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್ (ಆಳಂದ) : ಮಾನ್ಯ ಅಧ್ಯಕ್ಷರೆ, ತಾವು ಸರಿಯಾಗಿ ಗಮನಿಸಿದಿರಿ. ಇದರಲ್ಲಿ ಅನೇಕ ಗೊಂದಲಗಳಿವೆ. ಅಪಾಯವಿದೆ ಎಂದು ತಾವೇ ಹೇಳಿಸಿರಿ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಪ್ರತಿಷ್ಠೆ ಮಾಡಿಕೊಳ್ಳುವುದು ಬೇಡ. ಪಂಚಾಯಿತಿ–ಗಳು ಸಶಕ್ತರಾಗಬೇಕು, ಪಂಚಾಯಿತಿಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕೆಂದು ನಮ್ಮೆಲ್ಲರ ಕಾಳಜಿ ಇದೆ. ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟು ಬಂದಿರತಕ್ಕಂಥವರು. ಆದರೆ, ಸಮಗ್ರವಾಗಿ

ಚರ್ಚೆಯಾಗಬೇಕೆನ್ನುವ ಏನು ವಾದ ಇದೆ ಜಗದೀಶ್ ಶೆಟ್ಟರ್‌ರವರದ್ದು, ಇದರ ಬಗ್ಗೆ ನಮ್ಮ ನಾಯಕರು ಹೇಳಿದ ಹಾಗೆ Joint Select Committee ಗೆ ಕಳುಹಿಸಿ, termsof reference ನಲ್ಲಿ ಇನ್ನು ಪಂಚಾಯತಿ ರಾಜ್ ವ್ಯವಸ್ಥೆಗೆ ಏನೇನು ತಿದ್ದುಪಡಿಗಳಾಗಬೇಕು, ಆ ಎಲ್ಲಾ ತಿದ್ದುಪಡಿಗಳನ್ನು ಒಂದೇ ಸಲ ತಂದು ಇದನ್ನು ಸಮಗ್ರ ರೀತಿಯಲ್ಲಿ ಚರ್ಚೆ ಮಾಡಿದರೆ ಒಳ್ಳೆಯದು ಎನ್ನುವುದು ನನ್ನ ಸಲಹೆ.

ಶ್ರೀ ಎಸ್.ಚಿಕ್ಕಮಾದು (ಹೆಗ್ಗಡ ದೇವನ ಕೋಟೆ) : ಅತ್ಯಂತ ಹಿರಿಯಾದ ಮಾನ್ಯ ಸಚಿವರು ಸದನದಲ್ಲಿ ಮಸೂದೆ ಮಂಡಿಸಿದ್ದಾರೆ. ನನ್ನ ಭಾವನೆಯಲ್ಲಿ ಅವರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಪಾರವಾದ ಅನುಭವ ಇರತಕ್ಕಂಥವರು. ಈಗ ಬಂದಿರುವ ಕೆಲವು ತಿದ್ದುಪಡಿಗಳ ಬದಲಿಗೆ ಸಂಪೂರ್ಣವಾದಂಥ ತಿದ್ದುಪಡಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆಗಬೇಕಾಗಿರುವುದು ಅತ್ಯವಶ್ಯವಿದೆ. ದಯಮಾಡಿ ಸಚಿವರು ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ, ಮುಂದೂಡಿ, ಮತ್ತೊಂದು ಸಾರಿ ಸದನಕ್ಕೆ ತರಬೇಕು. ಒಬ್ಬ ವಾರ್ಡ್ ಸಮಿತಿಯ ಸದಸ್ಯನನ್ನು ಸಭೆಗೆ ಕರೆಯದಿದ್ದರೆ, ಅವನು disqualify ಮಾಡುವ ರೀತಿಯಲ್ಲಿ ತಿದ್ದುಪಡಿ ತಂದಿರುವುದು ಇದು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಮಾರಕ. ಒಬ್ಬ ಜನಪ್ರತಿನಿಧಿಯನ್ನು ವಾರ್ಡ್ ಸಭೆಗೆ ಕರೆದಿಲ್ಲವೆಂದು ಏಕಾಏಕಿ ನೀವು stroke ಹೊಡೆದು ಹಾಕಿ ಬಿಟ್ಟರೆ, ಹಲವಾರು ಓಟು ತೆಗೆದುಕೊಂಡು ಬಂದಿರತಕ್ಕಂಥವನ ಗತಿ ಏನು? ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಒಂದು ಪಂಚಾಯಿತಿಯಲ್ಲಿ ಒಬ್ಬ ಪಿಡಿಓ ಮತ್ತು ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿದ್ದೀರಿ. ಅವರ ಕಾರ್ಯವ್ಯಾಪ್ತಿ ಏನು? ಈ ಇಬ್ಬರು ಪಂಚಾಯಿತಿಯಲ್ಲಿರುವುದರಿಂದ ಏನಾಗಿದೆ ಎಂದರೆ, ಕಾರ್ಯದರ್ಶಿ ಸಹಿ ಹಾಕಿದರೆ ಪಿಡಿಓ ಸಹಿ ಹಾಕುವುದಿಲ್ಲ. ಕೊಡಬೇಕಾಗಿರುವ ಕಮಿಷನ್ ಅನ್ನು ಕೊಡಲೆಂದು ಈ ರೀತಿ ಮಾಡುತ್ತಿದ್ದಾರೆ.

ಅಧ್ಯಕ್ಷರು : ಆ ವಿಷಯ ಬಿಟ್ಟು ಬೇರೆ ವಿಷಯ ಹೇಳಿ.

ಶ್ರೀ ಎಸ್.ಚಿಕ್ಕಮಾದು :- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಗ್ರಾಮ ಪಂಚಾಯತಿಯಲ್ಲಿ ಎರಡು ಜನರ ಅವಶ್ಯಕತೆ ಕಾಣುತ್ತಿಲ್ಲ. ಒಂದು ಪಂಚಾಯಿತಿಯಲ್ಲಿ ಒಬ್ಬ ಅಧಿಕಾರಿ ಇದ್ದರೆ ಸಾಕು. ಗ್ರಾಮ ಸಭೆ ಮತ್ತು ಮಾಸಿಕ ಸಭೆ ಕರೆಯತಕ್ಕಂಥ ಪೂರ್ಣ ಅಧಿಕಾರ ಆ ಪಂಚಾಯಿತಿಯ ಪಿಡಿಓಗೆ

ಇರಬೇಕು ಸದಸ್ಯನಿಗೆ ಅಲ್ಲ. 6 ತಿಂಗಳಿಗೊಮ್ಮೆ ಕರೆಯತಕ್ಕಂಥ ಸಭೆಯನ್ನು ಅವರು ಮಾಡಿಕೊಂಡು ಹೋಗಬೇಕಾಗುತ್ತದೆ. ಸಭೆಯನ್ನು ಕರೆಯಲಿಲ್ಲವೆಂದು ಅದನ್ನೇ ದುರ್ನಡತೆ ಎಂದು ಭಾವಿಸಿ ಒಬ್ಬ ಜನ ಪ್ರತಿನಿಧಿಯನ್ನು ಕಿತ್ತು ಹಾಕುವಂಥದ್ದು ಸರಿಯಲ್ಲ. ಇದರ ಬಗ್ಗೆ ಸುದೀರ್ಘವಾದ ಚರ್ಚೆ ಆಗಬೇಕಾಗಿರುವುದರಿಂದ ದಯಮಾಡಿ ಮತ್ತೊಂದು ಸಾರಿ ಈ ಬಿಲ್‌ಅನ್ನು ತಂದರೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ) : ಮಾನ್ಯ ಅಧ್ಯಕ್ಷರೆ, ಇವತ್ತು ತಂದಿರುವ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕಕ್ಕೆ ತಿದ್ದುಪಡಿ ಏನು ತಂದಿದ್ದಾರೆ, ಇದನ್ನು ವಿರೋಧಿಸುವುದಕ್ಕೆ ನಾನು ಬದ್ಧನಾಗಿದ್ದೇನೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಒಬ್ಬ ಹಿರಿಯ ಸಚಿವರಾಗಿ ಇದನ್ನು ಬಹಳ ತರಾತುರಿಯಲ್ಲಿ ತರುವಂಥ ಕಾರಣ ಏನೆಂಬುದು ಗೊತ್ತಾಗುತ್ತಿಲ್ಲ. ಇದನ್ನು ಪ್ರಾರಂಭಿಕ ಅಧಿವೇಶನದಲ್ಲೇ ಇಷ್ಟು ತರಾತುರಿಯಲ್ಲಿ ತರುವುದಕ್ಕೆ ಏನು ಉದ್ದೇಶ ಇದೆ ಎಂಬುದು ಅರ್ಥವಾಗುತ್ತಿಲ್ಲ. ಇದನ್ನು ಸಾರ್ವಜನಿಕವಾಗಿ ಚರ್ಚೆಗೆ ಒಳಪಡಿಸಬಹುದಾಗಿತ್ತು. ಇದರ ಪರ ಮತ್ತು ವಿರೋಧಗಳ ಬಗ್ಗೆ ಹಾಗೂ ಇನ್ನೂ ಅನೇಕ ಸಂಗತಿಗಳನ್ನು ಸಾಮೂಹಿಕವಾಗಿ ಚರ್ಚೆಗೆ ಒಳಪಡಿಸಬಹುದಾಗಿತ್ತು. ಆದರೆ, ಅದನ್ನು ಏನೂ ಮಾಡದೆ ತರಾತುರಿಯಲ್ಲಿ ತರುವಂಥದ್ದು ಸರಿಯಲ್ಲ. ಮತ್ತು ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ವಿಧಾನಪರಿಷತ್‌ನಲ್ಲಿದ್ದಾರೆ. ಅದರ ಜೊತೆಗೆ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕೆಲಸ ಮಾಡಿರುವಂಥ ಅನೇಕ ಪ್ರಮುಖರು ಬೇರೆ ಬೇರೆ ಸಮಿತಿಗಳಲ್ಲಿ ಕೆಲಸ ಮಾಡಿರುವಂಥ ಅನುಭವವನ್ನು ಹೊಂದಿರುವಂಥವರೂ ಇದ್ದಾರೆ. Non-official and official level ನಲ್ಲಿರುವವರೂ ಸಹ ಇದ್ದಾರೆ. ಆದ್ದರಿಂದ ಇದರ ಬಗ್ಗೆ ಸಮಗ್ರವಾಗಿ ಬೇರೆ ಬೇರೆ ಹಂತಗಳಲ್ಲಿ ಚರ್ಚೆ ಮಾಡದೆ ತರಾತುರಿಯಲ್ಲಿ ತರುವುದಕ್ಕೆ ಮುಂದಾಗಿರುವುದು ತಪ್ಪು. ನಮ್ಮ ಮಹಾರಾಜರ ಕಾಲದಿಂದ ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಿಂದ ಕರ್ನಾಟಕ ರಾಜ್ಯಕ್ಕೆ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಬಹಳ ದೊಡ್ಡ ಹಿನ್ನಲೆ ಇದೆ. ವಿಕೇಂದ್ರೀಕರಣ ವ್ಯವಸ್ಥೆಯನ್ನು ಮಾನ್ಯ ನಜೀರ್‌ಸಾಬ್‌ರವರು ತಂದರು. ಆನಂತರ ಕೇಂದ್ರ ಸರ್ಕಾರ ಸಂವಿಧಾನ ತಿದ್ದುಪಡಿ ಮಾಡಿರುವಂಥ ಇತ್ಯಾದಿ

ಹಿನ್ನಲೆಗಳು ಇವೆ. ಈಗ ಮೂರು ವ್ಯವಸ್ಥೆಗಳ ಬಗ್ಗೆ ಅಂದರೆ three-tier system ಬೇಕೋ ಅಥವಾ ಬೇಡವೋ ಎಂಬ ಬಗ್ಗೆ ದೇಶ ಮಟ್ಟದಲ್ಲಿ ಚರ್ಚೆ ನಡೆಯುತ್ತಿರುವಾಗ ಈಗ ತರಾತುರಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಅಥವಾ ಸದಸ್ಯರನ್ನು ಮಾತ್ರ ಜವಾಬ್ದಾರಿಗೊಳಿಸುವುದಕ್ಕೆ ತಂದಿರುವ ಈ ತಿದ್ದುಪಡಿ ಈಗಾಗಲೇ ಉಲ್ಲೇಖವಾಗಿರುವಂಥ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿಗೆ ಬಹಳ ದೊಡ್ಡ ಏಟನ್ನು ಕೊಡುವಂಥ ಒಂದು ಪದ್ಧತಿಯಾಗಿದೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಏಕೆ ಈ ರೀತಿಯಾಗಿ ತರಾತುರಿ ಮಾಡಿದ್ದಾರೋ ಗೊತ್ತಾಗುತ್ತಿಲ್ಲ. ಅಲ್ಲಿ ಇಓ ಮತ್ತು ಪಿಡಿಓ ಹಾಗೂ ಕಾರ್ಯದರ್ಶಿಗಳನ್ನು ಜವಾಬ್ದಾರಿಗಳನ್ನಾಗಿ ಮಾಡದೆ ಕೇವಲ ಅಧ್ಯಕ್ಷರ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ಜವಾಬ್ದಾರಿಯನ್ನಾಗಿ ಮಾಡುವುದು ಯಾವ ವ್ಯವಸ್ಥೆಗೆ ಶೋಭೆ ತರುತ್ತದೆ ಹೇಳಿ? ಇವತ್ತು ಅಧಿಕಾರಿಗಳು ಸ್ಥಳೀಯ ಹಂತದಲ್ಲಿ ಹೇಗೆ ವರ್ತನೆ ಮಾಡುತ್ತಿದ್ದಾರೆಂಬುದು ನಮ್ಮೆಲ್ಲರಿಗೂ ಪ್ರತ್ಯಕ್ಷವಾಗಿ ಗೊತ್ತಿದೆ. ಈಗ ಅವರಿಗೆ ಮತ್ತಷ್ಟು ರಕ್ಷಣೆ ಕೊಟ್ಟು ಜನಪ್ರತಿನಿಧಿಗಳಿಗೆ ಮತ್ತಷ್ಟು ಭಯ ಮೂಡಿಸುವಂಥ ಒಂದು ಪ್ರಯತ್ನ ಏನಿದೆ, ಅದು ಅಧಿಕಾರಿ ಶಾಹಿ ವ್ಯವಸ್ಥೆಗೆ ಶಕ್ತಿ ಕೊಡುವಂಥ ಮತ್ತು ಆ ವ್ಯವಸ್ಥೆಯನ್ನು ಬಲಗೊಳಿಸುವಂಥ ಹಾಗೂ ಬ್ರಿಟಿಷ್ ವ್ಯವಸ್ಥೆಯ ಮಾನಸಿಕತೆಯನ್ನು ಮುಂದುವರಿಸುವಂಥ ಸರ್ಕಾರದ ಈ ಧೋರಣೆ ಖಂಡನೀಯ. ಇದು ಯಾವ ಕಾಲಕ್ಕೂ ಸರಿಯಲ್ಲ. ಜನಪ್ರತಿನಿಧಿಗಳಿಗೆ ಜವಾಬ್ದಾರಿ ಇರಬೇಕು. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ, ಜನಪ್ರತಿನಿಧಿಗಳ ಜೊತೆಗೆ ಅಧಿಕಾರಿಗಳಿಗೆ ಇನ್ನಷ್ಟು ಹೆಚ್ಚು ಜವಾಬ್ದಾರಿಗಳು ಇರಬೇಕು. ಅಧಿಕಾರಿಗಳಿಗೆ ಇನ್ನಷ್ಟು ಜವಾಬ್ದಾರಿಗಳನ್ನು ಕೊಡುವಂಥ ಪ್ರಯತ್ನಗಳು ಇಂಥ ಒಂದು ಶಾಸನ ಸಭೆಯಿಂದ ಆಗಬೇಕೇ ಹೊರತು ಜನಪ್ರತಿನಿಧಿಗಳಿಗೆ ಅದರಲ್ಲಿಯೂ ಚುನಾಯಿತರಾಗಿ ಬಂದಂಥವರಿಗೆ ಈ ರೀತಿಯಾಗಿ ಒಂದು ಕೊಡಲಿ ಏಟು ಕೊಡುವಂಥದ್ದು ಆಗಬಾರದೆಂದು ನಾನು ಆಗ್ರಹಿಸುತ್ತೇನೆ. ಇದರ ಬಗ್ಗೆ ಚರ್ಚೆಯಾದ ನಂತರ ಮತ್ತೆ ಈ ಸದನಕ್ಕೆ ಬರಲೆಂದು ನಾನು ಆಗ್ರಹಿಸುತ್ತಿದ್ದೇನೆ.

ಶ್ರೀ ಕೆ.ಬಿ.ಕೋಳಿವಾಡ್ (ರಾಣಿ ಬೆನ್ನೂರು) : ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣದ ಘೋಷಣೆಯನ್ನು ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಬೇಲೂರು ಘೋಷಣೆ ಎಂದು ನಾನೇ ಘೋಷಣೆ ಮಾಡಿದ್ದೆ.

ಶ್ರೀಮತಿ ಸೋನಿಯಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಇದನ್ನು ಘೋಷಣೆ ಮಾಡಲಾಗಿತ್ತು. ಈ ಬಿಲ್‌ನಲ್ಲಿ ತಾವು ಎತ್ತಿರುವ ಪ್ರಶ್ನೆ ಏನೆಂದರೆ, ಅಧಿಕಾರ ವ್ಯಾಪ್ತಿ ಯಾವ ಮೆಂಬರ್‌ಗೆ ಎಂದು ಪ್ರಶ್ನೆ ಮಾಡಿದ್ದೀರಿ. ಆದರೆ, ಇದರಲ್ಲಿ ಕ್ಲಿಯರ್ ಆಗಿದೆ. ಅದೇನೆಂದರೆ,

"The Adhyaksha of the Grama Panchayath shall nominate any other member of the Grama panchayath to convene the meeting. A member is going to be authorized by the president of the panchayath to convene a meeting."

ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷರಿಗೆ ಇದ್ದಂಥ ಪವರ್ ಅನ್ನು decentralize ಆಗಿ ಮೆಂಬರ್ಸ್‌ಗೂ ಸಹಿತ ಮೀಟಿಂಗ್ ಕರೆಯುವಂಥ ಅಧಿಕಾರವನ್ನು ಒದಗಿಸಿ ಕೊಡುತ್ತಿದ್ದೇವೆ. ನಾವೇನು centralize ಮಾಡುತ್ತಿಲ್ಲ. Decentralize ಮಾಡುತ್ತಿದ್ದೇವೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರವನ್ನು ಸದಸ್ಯರಿಗೂ ಸಹ ಕೊಡತಕ್ಕಂಥ ಕೆಲಸವನ್ನು ನಾವು ಇವತ್ತು ಮಾಡುತ್ತಿದ್ದೇವೆ. ನಾವು decentralize ಮಾಡುತ್ತಿದ್ದೇವೆ ಹೊರತು centralize ಮಾಡುತ್ತಿಲ್ಲ. ಆದರೆ, disqualify ಮಾಡಬೇಕು ಅಥವಾ ಬಿಡತಕ್ಕಂಥದ್ದು that is a different issue. It is the subject for discussion. This is my submission.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಸಚಿವರು):- ಮಾನ್ಯ ಅಧ್ಯಕ್ಷರೆ, ವಾರ್ಡ್ ಸಭೆಯನ್ನು ಯಾರು ಕರೆಯಬೇಕೆಂಬುದು ಪ್ರಶ್ನೆಯಾಗಿದೆ. ಅದರ ಬಗ್ಗೆ ಮೊದಲು ರೂಲ್ಸ್‌ನಲ್ಲಿ ಏನಿದೆ ಎಂದರೆ, ಗ್ರಾಮ ಪಂಚಾಯತಿಯ ಪ್ರತಿ ಸದಸ್ಯನು ತಾನು ಎಲ್ಲಿಂದ ಚುನಾಯಿತನಾಗಿ ಇರುತ್ತಾನೆಯೋ ಅಲ್ಲಿಂದ ವಾರ್ಡ್‌ಸಭೆಯ ಸಮಾವೇಶಕಾರನಾಗಿರುತ್ತಾನೆ. ಹಾಗೂ ವಾರ್ಡ್ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾನೆ ಎಂಬುದು ರೂಲ್ಸ್‌ನಲ್ಲಿತ್ತು. ಈಗ ನಾವು ಏನು ಬದಲಾವಣೆ ಮಾಡಿದ್ದೇವೆಂದರೆ, ಅದನ್ನು ಆ್ಯಕ್ಟ್‌ನಲ್ಲಿ ತಂದಿದ್ದೇವಷ್ಟೆ. ಆ್ಯಕ್ಟ್‌ನಲ್ಲಿ ಏನು ತಂದಿದ್ದೇವೆಂದರೆ:

"Ward Sabha shall be held at least seven days before the meeting of the Grama Sabha. Every member of the Grama sabha representing the ward shall convene the meetings of the ward sabha".

ಆತನೇ ಮೀಟಿಂಗ್ ಕರೆಯುವಂಥವನು. ಯಾವ ಉದ್ದೇಶಕ್ಕೋಸ್ಕರ ಅಮೆಂಡ್‌ಮೆಂಟ್ ತರಲಾಗಿದೆ ಎಂದರೆ ವಾರ್ಡ್ ಸಭೆಗಳು ನಡೆಯುತ್ತಿಲ್ಲವೆಂದು ಎಲ್ಲ ಕಡೆಯಿಂದ ದೂರು ಬಂದಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಪಂಚಾಯಿತಿಗೆ ಬಂದಿರತಕ್ಕಂಥದ್ದರಲ್ಲಿ ಅವರುಗಳೇ ಪಾಲು ಮಾಡಿಕೊಂಡು ಕುಳಿತುಕೊಂಡಿರುತ್ತಾರೆ. ಆ ಕಾರಣಕ್ಕಾಗಿ ವಾರ್ಡ್ ಸಭೆನಡೆಯಲಿಲ್ಲವೆಂಬುದು ಎಲ್ಲ ಕಡೆ ಇರತಕ್ಕಂಥ ಆರೋಪವಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ :- ವಾರ್ಡ್ ಸಭೆಗಳನ್ನು ಲೈಟ್, ರಸ್ತೆ, ಕುಡಿಯುವ ನೀರಿಲ್ಲ ಎಂದು ಸಭೆ ಮಾಡುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ :- ಹಾಗಾದರೆ, ವಾರ್ಡ್ ಸಭೆಗಳನ್ನು ಮಾಡಬಾರದೆ? ಆ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರವೇ ಈ ಆ್ಯಕ್ಟ್ ಅನ್ನು ತಂದಿರುವುದು.

ಶ್ರೀ ಕೆ.ಎಂ.ಶಿವಲಿಂಗೇಗೌಡ :- ಪಂಚಾಯಿತಿಗೆ ಕೊಡುವ ದುಡ್ಡು ರಿಪೇರಿಗೆ ಸಾಕಾಗುವುದಿಲ್ಲ. ಆದ್ದರಿಂದ, ಅಲ್ಲಿನ ವಾಸ್ತವಾಂಶವನ್ನು ನೋಡಿ.

ಶ್ರೀ ಟಿ.ಬಿ.ಜಯಚಂದ್ರ :- ವಾರ್ಡ್‌ಸಭೆಯನ್ನು ಕರೆದರೆ ಅನೇಕ ವಿಚಾರಗಳು ಚರ್ಚೆಗೆ ಬರುತ್ತದೆಂಬ ಕಾರಣಕ್ಕೋಸ್ಕರ ಸಭೆಯನ್ನೇ ಕರೆಯಬಾರದೆಂದು ಹೇಳಿದರೆ ಹೇಗೆ? ನನಗೆ ಅನುಭವಕ್ಕೆ ಬಂದಿರುವ ಒಂದು ವಿಚಾರವನ್ನು ಹೇಳುತ್ತೇನೆ. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮ ಪಂಚಾಯತಿಗೆ 50 ರಿಂದ 60 ಲಕ್ಷ ರೂಪಾಯಿ ಎಂದು ಮಾಡಿದ್ದಾರೆ. ಸದಸ್ಯರು ಹಂಚಿಕೊಳ್ಳುತ್ತಾರೆ. ಇದರಲ್ಲಿ ಏನಾದರೂ ಒಳ್ಳೆಯ ಕೆಲಸ ಆಗುತ್ತದೆಯೇ? ಒಬ್ಬೊಬ್ಬ ಸದಸ್ಯನಿಗೆ 3 ಲಕ್ಷ ರೂಪಾಯಿ ಬಂದರೆ ಆತನ ಮನೆ ಮುಂದೆ ಒಂದು ಚರಂಡಿ ಮಾಡಿ ನಿಲ್ಲಿಸಿಬಿಡುತ್ತಾನೆ. ನೀರೆಲ್ಲ ಅಲ್ಲಿಯೇ ನಿಂತುಕೊಂಡಿರುತ್ತದೆ. ವಾರ್ಡ್ ಸಭೆಗಳನ್ನು ಮಾಡಲಿಲ್ಲವೆಂಬ ಕಾರಣಕ್ಕೋಸ್ಕರ ಅದನ್ನು compulsory ಮಾಡಬೇಕೆಂಬ

ಕಾರಣಕ್ಕೋಸ್ಕರ ಇದನ್ನು ತಂದಿದ್ದೇವೆ ವಿನಹಾ ಅವರನ್ನು ವಜಾ ಮಾಡಬೇಕು ಮತ್ತೊಂದು ಮಾಡಬೇಕೆಂಬುದು ಸರ್ಕಾರದ ಉದ್ದೇಶ ಅಲ್ಲ.

ಅಧ್ಯಕ್ಷರು :- ನನ್ನ concern ಅನ್ನೂ ಸಹ ಹೇಳಿ ಬಿಡುತ್ತೇನೆ. ಏಕೆಂದರೆ, ಇವತ್ತು ಅಲ್ಲಿ ಮಹಿಳೆಯರು, ಹರಿಜನ-ಗಿರಿಜನ, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಹಾಗೂ ಕೇವಲ ಹೆಬ್ಬೆಟ್ಟು ಹಾಕುವವರು ಅಲ್ಲಿದ್ದಾರೆ. ಇವರ ಮೇಲೆ ಆ ವಾರ್ಡ್ ಸಭೆಯನ್ನು ಕರೆಯುವಂಥ ಅಧಿಕಾರವನ್ನು ಅವರಿಗೆ ನೀವು ಕೊಟ್ಟರೆ ಅಪಾಯ ಇದೆ, ಎಚ್ಚರಿಕೆ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ) :- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಆಗಿರುವ ಒಂದು ಕತೆಯನ್ನು ಹೇಳುತ್ತೇನೆ. Reservation ಗೆ ಸೇರಿದಂಥವರು ಗ್ರಾಮಪಂಚಾಯಿತಿಯ ಅಧ್ಯಕ್ಷರಾಗಿದ್ದಾರೆ. ಅವರ ಮತ್ತು ಪಿಡಿಓ ನಡುವೆ ಒಂದು ಒಪ್ಪಂಧವಾಗಿತ್ತು. ಅದೇನೆಂದರೆ, ಯಾವುದೇ ಒಂದು ಚೆಕ್‌ಗೆ ಸಹಿ ಹಾಕಬೇಕಾದರೆ, 250 ರೂಪಾಯಿ ಕೊಡಬೇಕೆಂದು ಒಪ್ಪಂದವಾಗಿತ್ತು. ಅಧ್ಯಕ್ಷರಿಗೆ ಒಂದು ವರ್ಷದಿಂದ ಸಂಬಳ ಬಂದಿರಲಿಲ್ಲ. ಒಂದು ದಿವಸ ಅಧ್ಯಕ್ಷರ ಸಂಬಳ ಬಂತು. ಪಿಡಿಓ ಸಂಬಳದ 12 ಚೆಕ್‌ಗಳನ್ನು ತೆಗೆದುಕೊಂಡು ಅಧ್ಯಕ್ಷರ ಹತ್ತಿರ ಹೋಗಿ ಇದಕ್ಕೆ ಸಹಿ ಮಾಡಿ ನಿಮಗೆ ಸಂಬಳ ಕೊಡುತ್ತೇವೆಂದು ಹೇಳಿದಾಗ ನನಗೆ ಅದೆಲ್ಲಾ ಗೊತ್ತಿಲ್ಲ, ಒಟ್ಟು 12 ಚೆಕ್ ಇದೆ, ಒಂದೊಂದು ಚೆಕ್‌ಗೆ 250 ರೂಪಾಯಿಯಂತೆ ಲೆಕ್ಕ ಹಾಕಿ ಒಟ್ಟು 3000 ರೂಪಾಯಿ ಕೊಟ್ಟು ಸಹಿ ಹಾಕಿಸಿಕೊಳ್ಳಿ ಎಂದು ಹೇಳಿದರು. ಇಂಥ ಪರಿಸ್ಥಿತಿ ಇವತ್ತಿನ ದಿವಸ ಪಂಚಾಯತಿಯಲ್ಲಿರುವಾಗ ನೀವು ಈ ತಿದ್ದುಪಡಿಯನ್ನು ತರುವುದಕ್ಕೆ ಹೊರಟಿದ್ದೀರಿ. ಅಮಾಯಕರ ಮೇಲೆ ದಯಮಾಡಿ ಗದಾಪ್ರಹಾರ ಮಾಡುವುದಕ್ಕೆ ಹೋಗಬೇಡಿ. ಮೊದಲು ನಿಮ್ಮ ಅಧಿಕಾರಿಗಳಿಗೆ ಇದರ ಜವಾಬ್ದಾರಿಯನ್ನು ಫಿಕ್ಸ್ ಮಾಡಿ. ಅವರು ಸಹ ಗ್ರಾಮ ಸಭೆಯನ್ನು ಕರೆಯಲಿ. ತಾಲ್ಲೂಕು ಮಟ್ಟದ ಅಧಿಕಾರಿಗಳು ಇವತ್ತಿನ ದಿವಸ ಗ್ರಾಮಪಂಚಾಯಿತಿ ಸಭೆಗೆ ಭಾಗವಹಿಸಬೇಕೆಂದು ಇದ್ದರೂ ಸಹ ಒಬ್ಬ ಅಧಿಕಾರಿ ಸಹ ಅಲ್ಲಿಗೆ ಹೋಗುವುದಿಲ್ಲ.

ಅಧ್ಯಕ್ಷರು :- ಮಾನ್ಯ ಬಾಲಕೃಷ್ಣರವರೆ, ಮಾನ್ಯ ಸಚಿವರು ನಿಂತಿದ್ದಾರೆ. ಆದ್ದರಿಂದ, ಅವರು ಮೊದಲು ಮುಗಿಸಲಿ.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಇದ್ದಂಥ ಸಂದರ್ಭದಲ್ಲಿ ಪಟ್ಟಭದ್ರಹಿತಾಸಕ್ತಿಗಳು ತಮ್ಮ ಪ್ರವೇಶ ಮಾಡುತ್ತಾರೆ ಎನ್ನತಕ್ಕಂಥದ್ದು ಇದೆ. ಆದರೆ, ಆ ಮಾತನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಇವತ್ತಿನ ದಿವಸ ಗ್ರಾಮ ಪಂಚಾಯತಿ ಸದಸ್ಯರಾಗಿರತಕ್ಕಂಥವರು 'shall', they have to convene ಅಂದಾಗ ಎಲ್ಲರೂ ಕೂಡ ಬರಲೇ ಬೇಕು. ಪಟ್ಟಭದ್ರ ಹಿತಾಸಕ್ತಿಗಳನ್ನು ದೂರ ಇಡುವುದಕ್ಕೋಸ್ಕರವೇ ವಾರ್ಡ್ ಸಭೆಗಳನ್ನು ಕಂಪಲ್ಸರಿ ಮಾಡಬೇಕೆನ್ನುವುದನ್ನು ಬಿಟ್ಟರೆ ಇದರಲ್ಲಿ ಬೇರೆ ಯಾವುದೇ ಉದ್ದೇಶವಿಲ್ಲ. ಈಗ ವಾರ್ಡ್‌ನ ಸದಸ್ಯರು, ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಸಭೆಯನ್ನು ಸರಿಯಾಗಿ ಕರೆಯುತ್ತಿಲ್ಲ. ಸಭೆಗಳು ನಡೆಯುತ್ತಿಲ್ಲ ಎನ್ನುವ ಕಾರಣಕ್ಕೋಸ್ಕರ ಈ ವಿಧೇಯಕವನ್ನು ತಂದಿದ್ದೇವೆ. ಪ್ರಾಯೋಗಿಕವಾಗಿ ನೋಡೋಣ. ಇದರಲ್ಲಿ ಯಾವ ರೀತಿಯಿಂದಾದರೂ ತೊಂದರೆ ಬಂದಂಥ ಸಂದರ್ಭದಲ್ಲಿ ಮರುಪರಿಶೀಲನೆ ಮಾಡಲು ಅವಕಾಶವಿರುತ್ತದೆ. ಇದನ್ನು ಪ್ರಾಯೋಗಿಕವಾಗಿ ಮಾಡಿ ನೋಡೋಣ. ನಮ್ಮ ಉದ್ದೇಶವೆಂದರೆ ಅದು ಕಂಪಲ್ಸರಿಯಾಗಿ ಆಗಬೇಕು. ಗ್ರಾಮ ಪಂಚಾಯಿತಿಯ ಸದಸ್ಯರು ಸಭೆ ಕರೆಯಬೇಕು ಎನ್ನುವುದು ನಮ್ಮ ಉದ್ದೇಶ ಹೊರತು ಬೇರೆ ಏನೂ ಇಲ್ಲ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರು.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ಸೆಕೆಂಡಿನಲ್ಲಿ ನನ್ನ ಒಂದು ಅನುಭವವನ್ನು ಹೇಳುತ್ತೇನೆ.

ಅಧ್ಯಕ್ಷರು : ನಾನು ನಿಮಗೆ ಈಗಾಗಲೇ ಅವಕಾಶವನ್ನು ಕೊಟ್ಟಿದ್ದೇನೆ. ಪಾಟೀಲರೇ, ದಯವಿಟ್ಟು ಕೇಳಿ, ನಾನು ಈಗ ರೇವಣ್ಣನವರನ್ನು ಕರೆದಿದ್ದೇನೆ, ನಿಮ್ಮನ್ನು ಆಮೇಲೆ ಕರೆಯುತ್ತೇನೆ.

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ : ನಾನು ಒಂದು ವಿಷಯವನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು : ಹಾಗೆ ಹೇಳಲು ಆಗುವುದಿಲ್ಲ. ರೇವಣ್ಣನವರೇ ನೀವು ಮಾತನಾಡುತ್ತೀರೋ, ಇಲ್ಲವೋ? ಪಾಟೀಲರೇ ನಿಮಗೆ ಆಮೇಲೆ ಕೊಡುತ್ತೇನೆ, ಸುಮ್ಮನಿರಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಹಿರಿಯ ಸದಸ್ಯರಾದ ಹೆಚ್.ಕೆ.ಪಾಟೀಲರು ತರಾತುರಿಯಲ್ಲಿ ಯಾವ ಉದ್ದೇಶಕ್ಕಾಗಿ ಈ ವಿಧೇಯಕವನ್ನು ತಂದಿದ್ದಾರೋ ಗೊತ್ತಿಲ್ಲ. ಕೆಲವು ಕಡೆ ಏನಾಗಿದೆ ಎಂದರೆ ನಾಲ್ಕು ಊರುಗಳು ಸೇರಿ ನಾಲ್ಕು ಸದಸ್ಯರು ಎಂದು ಮಾಡಿದ್ದಾರೆ. ಆದರೆ ಒಂದು ದೊಡ್ಡ ಊರಿದ್ದರೆ ನಾಲ್ಕು ಜನ ಸದಸ್ಯರೂ ಒಂದೇ ಊರಿನಿಂದ ಬಂದಿರುತ್ತಾರೆ, ಉಳಿದ ಮೂರು ಊರುಗಳ ಸದಸ್ಯರೇ ಇರುವುದಿಲ್ಲ. ಅಂಥ ಊರುಗಳಿಗೆ ನ್ಯಾಯ ಸಿಕ್ಕುವುದಿಲ್ಲ, ಅವರಿಗೆ ಜನತಾ ಮನೆಗಳು ಬಂದರೂ ಸಿಗುವುದಿಲ್ಲ, ಪಂಚಾಯಿತಿಯಿಂದ ಏನೇ ಬಂದರೂ ಸಿಗುವುದಿಲ್ಲ. ಯಾವುದು ದೊಡ್ಡ ಊರಿರುತ್ತದೋ ಅದಕ್ಕೆಮಾತ್ರ ಸಿಗುತ್ತದೆ. ಇಂಥ ಸನ್ನಿವೇಶವಿರುವಾಗ ನೀವು ಇದನ್ನು ತರಾತುರಿಯಲ್ಲಿ ತರುವುದು ಬೇಡ. ಏಕೆಂದರೆ, ಜಗದೀಶ್ ಶೆಟ್ಟರ್‌ರವರು ಪಂಚಾಯಿತಿ ಮಟ್ಟದಲ್ಲಿ ರಿಸರ್ವೇಷನ್ ಕೊಟ್ಟಿದ್ದಾರೆ, 50% ಸೀಟುಗಳನ್ನು ಮಹಿಳೆಯರಿಗೆ ಎಂದು ಕೊಟ್ಟಿದ್ದಾರೆ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಿ. ಇದನ್ನು ಜಂಟಿ ಸದನ ಸಮಿತಿಗೆ ಹಾಕಿ ಎಂದು ಯಡಿಯೂರಪ್ಪನವರು ಹೇಳಿದರು. ಜಂಟಿ ಸಮಿತಿಯಲ್ಲಿ ಚರ್ಚೆ ಮಾಡೋಣ. ನಮಗೆ ಬೇರೆ ಉದ್ದೇಶವೇನೂ ಇಲ್ಲ. ಹಿರಿಯ ಸಚಿವರು ತಂದಿರುವಾಗ ಇದಕ್ಕೆ ನಾವು ಇನ್ನೇನೋ ಹೇಳಬೇಕು ಎನ್ನುವುದಲ್ಲ. ಇದರಲ್ಲಿ ಅಪಾಯವಿದೆ ಎಂದು ಅಧ್ಯಕ್ಷರು ರೂಲಿಂಗ್ ಕೊಟ್ಟರು. ಮೊನ್ನೆ ಕಾವೇರಿ ವಿಷಯದಲ್ಲಿ ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ನಾವು ಸುಮ್ಮನಿಲ್ಲವೇ? ಅಧ್ಯಕ್ಷರೇ, ಇದರಲ್ಲಿ ಅಪಾಯವಿದೆ ಎಂದ ಮೇಲೆ ಸದಸ್ಯರು ಏನು ಹೇಳುವುದು? ಇದನ್ನುJoint select Committeeಗೆ ಹಾಕಿ. ಅಲ್ಲಿ ಚರ್ಚೆ ಮಾಡಿ ನಿಮಗೆ ಅನುಕೂಲವಾಗುವ ಹಾಗೆ ಮಾಡೋಣ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

ಅಧ್ಯಕ್ಷರು : ನೀವು ಆಗಲೇ ಹೇಳಿದಿರಲ್ಲ?

ಶ್ರೀ ಕೆ.ಬಿ.ಕೋಳಿವಾಡ : ಮಾನ್ಯ ಅಧ್ಯಕ್ಷರೆ, ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಕಾನೂನು ಪ್ರಕಾರ ತರಬೇಕಾದರೆ ಅಡಚಣೆಗಳು ಬರುವುದು ಸ್ವಾಭಾವಿಕ. ಹಿಂದೆ ದೇವರಾಜ ಅರಸುರವರ ಕಾಲದಲ್ಲಿ ನಾವು land reforms ತಂದೆವು. ಆಗ ಅದಕ್ಕೆ ಅನೇಕ ಅಡೆತಡೆಗಳು ಬಂದವು. ಈಗ ಅದು ಸಕ್ಸಸ್ ಆಗಿಲ್ಲವೇನು? ಅದೇ ರೀತಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣದ ದೃಷ್ಟಿಯಿಂದ ಈ ಒಂದು ಕಾನೂನನ್ನು ತಂದಿದ್ದೇವೆ. ಅಡಚಣೆಗಳು ಬಂದಾಗ ಆಗಾಗ ಬದಲಾವಣೆಗಳನ್ನು ಮಾಡುವಂಥ ಹಕ್ಕು ಸರ್ಕಾರಕ್ಕಿದೆ, ಅದರಂತೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ಬಿ.ಆರ್.ಪಾಟೀಲರೇ ಹೇಳಿ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಜಿ.ಟಿ. ದೇವೇಗೌಡರವರು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ಪಾಟೀಲರೇ, ನೀವು ಹೇಳಿ, ನಿಮ್ಮನ್ನು ಕರೆದಿದ್ದೇನೆ. ದೇವೇಗೌಡರು ಹೇಳುವುದನ್ನು ಬರೆದುಕೊಳ್ಳಬೇಡಿ.

(ಅಧ್ಯಕ್ಷರ ಆದೇಶದ ಮೇರೆಗೆ ಸದಸ್ಯರಾದ ಶ್ರೀ ಜಿ.ಟಿ.ದೇವೇಗೌಡರವರು ಮಾತನಾಡಿದುದನ್ನು ದಾಖಲು ಮಾಡಿಲ್ಲ)

(ಗೊಂದಲ)

ಅಧ್ಯಕ್ಷರು : ಹಾಗೆ ಹೇಳಿದರೆ ಆಗುವುದಿಲ್ಲ, ನಾನು ನಿಮ್ಮನ್ನು ಕರೆದಿಲ್ಲ, ದಯವಿಟ್ಟು ನೀವು ಹಾಗೆ ಮಾತನಾಡಬೇಡಿ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಿದ್ದುಪಡಿ ತಂದಿರುವುದನ್ನು ನಾನು ಸ್ವಾಗತಿಸುತ್ತೇನೆ. ಇನ್ನೂ ಅನೇಕ ತಿದ್ದುಪಡಿಗಳನ್ನು ತಾವು ತರಬೇಕಾಗಿದೆ. ಇದರಲ್ಲಿ ಒಂದು ಅಪಾಯವಿದೆ. ನಮ್ಮ ಕಡೆ ಮೀಸಲಾತಿ ಇದ್ದಂಥ ಸಂದರ್ಭದಲ್ಲಿ ಬೇರೆ ಬೇರೆಯವರನ್ನು ಕರೆದುಕೊಂಡು ಬಂದು ನಿಲ್ಲಿಸಿ ನಾವು ಗೆಲ್ಲಿಸುತ್ತೇವೆ. ತಮಗೆ ಗೊತ್ತಿರುವ ಹಾಗೆ ಅತ್ಯಂತ ದುರ್ಬಲ ವರ್ಗದಿಂದ, ಹಿಂದುಳಿದ ವರ್ಗದಿಂದ, ಅಕ್ಷರ ಜ್ಞಾನವೇ ಇಲ್ಲದಂಥವರು, ಹೆಣ್ಣುಮಕ್ಕಳು ಮತ್ತು ದಲಿತರು ಗೆದ್ದು ಬರುತ್ತಾರೆ. ವಾರ್ಡ್‌ನಲ್ಲಿ ಅವನ ಮಾತನ್ನು ಯಾರೂ ಕೇಳುವುದಿಲ್ಲ, ಅವನು ಕರೆದರೆ ಯಾರೂ ಬರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ಕಣ್ಣಾರೆ ನೋಡಿದ್ದೇನೆ. ನಾವು

ಪಂಚಾಯತಿಯ ಸದಸ್ಯರನ್ನಾಗಿ ಆರಿಸಿದಂಥವರು ಹೊಟ್ಟೆಪಾಡಿಗಾಗಿ ಬೇರೆ ಊರುಗಳಿಗೆ ಕೂಲಿ ಮಾಡಲು ಹೋಗುತ್ತಾರೆ. ಈ ರೀತಿ ನಮ್ಮ ಕಡೆ ಆಗಿದೆ. ಅಂಥ ಸಂದರ್ಭದಲ್ಲಿ ಅವನು ಗ್ರಾಮಸಭೆಯನ್ನು ಕರೆದಿಲ್ಲ ಎಂದು ಹೇಳಿ ಅವನನ್ನು ನೀವು disqualify ಮಾಡುವುದು ಸಾಧ್ಯವಾಗುವುದಿಲ್ಲ. ಅವರ ಮಾತನ್ನು ಯಾರೂ ಕೇಳುವುದಿಲ್ಲ, ಜನರೂ ಕೇಳುವುದಿಲ್ಲ. ಒಬ್ಬ ಹೆಣ್ಣುಮಗಳು ಕರೆದರೆ ಗ್ರಾಮಸಭೆಗೆ ಯಾರು ಬರುತ್ತಾರೆ? ತಮಗೆ ನಾನು ವಾಸ್ತವಿಕ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಗ್ರಾಮಸಭೆಗಳನ್ನು ಕರೆಯುವಂಥ ಒಂದು ಸಾಮಾಜಿಕ ವಾತಾವರಣ ಇವತ್ತು ನಮ್ಮ ಹಳ್ಳಿಗಾಡಿನಲ್ಲಿ ಇಲ್ಲ. ಗ್ರಾಮಸಭೆ ಕರೆದರೆ ನಾಲ್ಕು ಜನ ಕುಡುಕರು, ಬಲಿಷ್ಠರು ಮುಂತಾದವರೆಲ್ಲ ಸೇರಿ ತಮಗೆ ಏನು ಲಾಭ ಬೇಕೋ ಅದನ್ನು ದೋಚಿಕೊಂಡು ಹೋಗುತ್ತಾರೆ. ಯಾರು ಬಡವರು, ನಿರ್ಗತಿಕರು, ನಿಜವಾದಂಥ ಅರ್ಹರಿರುತ್ತಾರೋ ಅವರಿಗೆ ಯೋಜನೆಗಳ ಫಲ ಸಿಗುವುದಿಲ್ಲ.

ಅಧ್ಯಕ್ಷರು : ನಿಮ್ಮ ಸಲಹೆ ಏನು ಎಂದು ಹೇಳಿ.

ಶ್ರೀ ಬಿ.ಆರ್.ಪಾಟೀಲ್ : ಆದ್ದರಿಂದ ಇದನ್ನು ಸಮಗ್ರವಾಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು, ಹಿರಿಯರಾದ ಸನ್ಮಾನ್ಯ ಯಡಿಯೂರಪ್ಪನವರು, ಸಿ.ಟಿ.ರವಿಯವರು, ಬಾಲಕೃಷ್ಣರವರು, ಬಿ.ಆರ್.ಪಾಟೀಲರು, ಬೋಪಯ್ಯನವರು, ರೇವಣ್ಣನವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಇದನ್ನು ಬಹಳ ತರಾತುರಿಯಿಂದ ಏಕೆ ತಂದಿರಿ ಎಂದು ಸಿ.ಟಿ.ರವಿಯವರು ಬಹಳ ನೋವು ಮಾಡಿಕೊಂಡರು. ಮಾನ್ಯ ಸಿ.ಟಿ.ರವಿಯವರೇ, ನಿಮಗೆ ಒಂದು ಮಾತನ್ನು ಹೇಳಲು ಬಯಸುತ್ತೇನೆ. ನಿಮಗೆ ಗೊತ್ತಿರಲಿಕ್ಕಿಲ್ಲ, ಈ ಇಲಾಖೆಯನ್ನು ಸ್ವತಃ ನಿರ್ವಹಿಸಿರುವುದರಿಂದ ಜಗದೀಶ್ ಶೆಟ್ಟರ್‌ರವರಿಗೆ ಗೊತ್ತಿದೆ, ಗ್ರಾಮಸಭೆ ಕರೆಯುವುದನ್ನು ನಾವು mandate ಮಾಡಿ, ಯಾವುದಾದರೂ ಯೋಜನೆಯ ಸಲುವಾಗಿ ಸಭೆಯನ್ನು ಕರೆಯಿರಿ ಎಂದಾಗ technical ಆಗಿ ಕರೆದಿದ್ದಾರೆ. ಎಷ್ಟು ವಾರ್ಡ್ ಸಭೆಗಳು ನಡೆದಿವೆ ಎಂದು ಹೇಳಿ? No ward sabhas are conducted in spite of our enactment. ಸಂವಿಧಾನ, ಕಾನೂನು ಎಲ್ಲವೂ ಇದ್ದರೂ, ನಾವು ನೀವು ಕೂಡಿ ಮಾಡಿರುವ ಶಾಸನದ

ಅನುಷ್ಠಾನವಾಗಿಲ್ಲ. ಇದರಲ್ಲಿ ತರಾತುರಿ ಏನಿದೆ? ನಾವು ಏನು ಮಾಡುತ್ತಿದ್ದೇವೆ ಎಂದರೆ, ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಮೇಲೆ ಚಾಟಿಯನ್ನು Political bosses ಹಿಡಿಯುವುದಿಲ್ಲ, it will be given to some Regional Commissioner for taking action. ಆದರೆ ಯಾವ ಕಾರಣಕ್ಕಾಗಿ? ಆ ಕಾರಣವೇನೆಂದರೆ, ನಾವು ಜನರನ್ನು empower ಮಾಡುತ್ತಿದ್ದೇವೆ. ಗ್ರಾಮ ಸಭೆಯಲ್ಲಾಗಲೀ, ವಾರ್ಡ್ ಸಭೆಯಲ್ಲಾಗಲೀ ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅವನಿಗೆ ಅವಕಾಶ ಕೊಡುತ್ತಿದ್ದೇವೆ. ಶಿವಲಿಂಗೇಗೌಡರು ಹೇಳಿದರು, ವಾರ್ಡ್ ಸಭೆ ಕರೆದು ಏನು ಮಾಡುತ್ತೀರಿ? ಕರೆದರೆ ಗಟಾರ ಮಾಡು ಎನ್ನುತ್ತಾರೆ, ರಸ್ತೆ ಮಾಡು ಎನ್ನುತ್ತಾರೆ, ಇಲ್ಲಿ ತಗ್ಗು ಇದೆ ಅದನ್ನು ಮುಚ್ಚು ಎನ್ನುತ್ತಾರೆ ಎಂದು ಹೇಳಿದರು. ಅದರ ಸಲುವಾಗಿಯೇ ಗ್ರಾಮಸಭೆಗಳಿರುವುದು.

ಅಧ್ಯಕ್ಷರು : ವಾರ್ಡ್ ಸಭೆ ಕರೆಯುವುದು ತಪ್ಪು ಎಂದು ಇಲ್ಲಿ ಯಾರೂ ಹೇಳಲಿಲ್ಲ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಅಧಿಕಾರಿಗಳನ್ನು ಏಕೆ ಜವಾಬ್ದಾರರನ್ನಾಗಿ ಮಾಡಿಲ್ಲ?

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಸಭೆ ಕರೆಯುವುದು ತಪ್ಪು ಎಂದು ನಾವು ಹೇಳಲಿಲ್ಲ. ಆದರೆ ಅಲ್ಲಿ ಹಣ ಇರಬೇಕೆಂದು ಹೇಳಿದೆವು.

ಶ್ರೀ ಸಿ.ಟಿ.ರವಿ : ಅದನ್ನು ಕಂಪಲ್ಸರಿ ಮಾಡಿ ಅದಕ್ಕೆ Separate budget ಕೊಡಿ.

(ಗೊಂದಲ)

ಅಧ್ಯಕ್ಷರು : ಅಷ್ಟೇ ಸಾಕು, ಆಯಿತು.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ಅಸಮರ್ಪಕವಾಗಿ ಹೇಳಿದಿರಿ ಎಂದು ಹೇಳಿದ್ದಕ್ಕಾಗಿ ನಾನು ಹೇಳಿದೆ.

ಶ್ರೀ ಡಿ.ಎನ್.ಜೀವರಾಜ್ : ನಾವು ಹೇಳಿದ್ದು ಏನೆಂದರೆ, ನಾವು ನಿಮ್ಮ ವಾದವನ್ನು ಒಪ್ಪಿದ್ದೇವೆ, ತಾವು P.D.O.ಗಳನ್ನು, E.O.ಗಳನ್ನು ಜವಾಬ್ದಾರರನ್ನಾಗಿ ಮಾಡಿ, ಅವರನ್ನೂ ಇದಕ್ಕೆ ಜಾಯಿಂಟ್ ಮಾಡಿ.

ಶ್ರೀ ಹೆಚ್.ಕೆ.ಪಾಟೀಲ್ : ನಮ್ಮ ನಿಮ್ಮ ಜಗಳವಿರುವುದೇ ನಮ್ಮ ವಾದವನ್ನು ನೀವು ಒಪ್ಪಿಲ್ಲ ಎನ್ನುವುದಾಗಿದೆ. ಒಪ್ಪಿಕೊಂಡರೆ ಜಗಳವಿರುವುದಿಲ್ಲ. P.D.O.ಗಳನ್ನು ಜವಾಬ್ದಾರಿಯನ್ನಾಗಿ ಮಾಡಿ ಎಂದು ಅವರು ಹೇಳುತ್ತಾರೆ. Yes, ನಾವು ಕೇವಲ ವಾರ್ಡ್ ಸದಸ್ಯರನ್ನಾಗಲೀ, ಗ್ರಾಮ ಪಂಚಾಯಿತಿಯ ಅಧ್ಯಕ್ಷನನ್ನಾಗಲೀ, ಅವರನ್ನು ಮಾತ್ರ responsible, accounatable, ಹೊಣೆಗಾರರನ್ನಾಗಿ ಮಾಡುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನೂ ಸಹ ಜವಾಬ್ದಾರರನ್ನಾಗಿ ಮಾಡುತ್ತೇವೆ. ಅವರ ಸಲುವಾಗಿ ಹೊಸದಾಗಿ ಕಾನೂನು ತರಬೇಕಾಗಿಲ್ಲ. K.C.S.Rules ಇವೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಈಗಿರುವ ಕಾನೂನಿನಂತೆ ಇದುವರೆಗೆ ಯಾವ P.D.O. responsible ಆಗಿದ್ದಾನೆ? ಯಾವ P.D.O. ಅನ್ನು ನೀವು ಹೊರ ಹಾಕಿದ್ದೀರಿ? ಯಾವುದೇ P.D.O. ಅನ್ನು ನೀವು ಸಸ್ಪೆಂಡ್ ಮಾಡಿಲ್ಲ. ನೀವು amendmentನಲ್ಲೇ ಅದನ್ನು ಸೇರಿಸಬೇಕು.

(ಗೊಂದಲ)

ಅಧ್ಯಕ್ಷರು : "ಮಂಗ ಬುತ್ತಿ ತಿಂದು ಆಡಿನ ಮೂತಿಗೆ ಒರೆಸಿತಂತೆ", ಆ ರೀತಿಯಾಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಸಚಿವರಲ್ಲಿ ಒಂದು ಮನವಿ ಮಾಡುವುದೇನೆಂದರೆ, ಇದನ್ನು ತರಾತುರಿಯಿಂದ ತಂದಿದ್ದೀರೋ, ವ್ಯವಸ್ಥೆಯನ್ನು ಇನ್ನೂ ಉತ್ತಮವಾದಂಥ ಮಟ್ಟಕ್ಕೆ ತರಬೇಕೆಂದು ತಂದಿದ್ದೀರೋ ಇದೆಲ್ಲದರ ಬಗ್ಗೆ ಚರ್ಚೆಯನ್ನು ಮಾಡೋಣ. ಮೊನ್ನೆ ಅಶೋಕ್ ಖೇಣಿಯವರು ಭಾಷಣ ಮಾಡುವಾಗ, ನಮಗೆ ನೀವು ಬ್ರೀಫ್‌ಕೇಸ್‌ನಲ್ಲಿ ನೀತಿ-ನಿಯಮಾವಳಿಗಳ ಪುಸ್ತಕವನ್ನು ಕೊಟ್ಟಿದ್ದೀರಿ, ಅದನ್ನು ಓದಿ ತಿಳಿದುಕೊಳ್ಳುವುದಕ್ಕೇ ನಮಗೆ ಐದು ವರ್ಷ ಬೇಕು ಎಂದು ಹೇಳಿದರು. ಅವರು ಬಹಳ ದೊಡ್ಡ ಜ್ಞಾನ ತಿಳುವಳಿಕೆ

ಹೊಂದಿರತಕ್ಕಂಥವರು. ಹಲವಾರು ಸದಸ್ಯರು ಇಲ್ಲಿ ಹೇಳಿದರು, ಇವತ್ತು ಹಲವಾರು ಪಂಚಾಯಿತಿಗಳಿಗೆ reservation system ನಲ್ಲಿ ಅಭ್ಯರ್ಥಿಗಳು ಸಿಗದೆ ನಾವು ಎಲ್ಲೆಲ್ಲಿಂದಲೋ ಕರೆದುಕೊಂಡು ಬಂದು ಅಭ್ಯರ್ಥಿಗಳನ್ನು ಮಾಡುತ್ತೇವೆ. ಸದಸ್ಯರು ಹೇಳಿದಂತಹ ರೀತಿಯಲ್ಲಿ ಅವರು ಅವಿದ್ಯಾವಂತರು, ಅವರ ಕುಟುಂಬಗಳಲ್ಲಿ ಕಷ್ಟಗಳು ಇರುತ್ತವೆ. ಹಲವಾರು ಪಂಚಾಯಿತಿ Member ಗಳು ಕೂಲಿ ಮಾಡಿ ಕೆಲಸ ಮಾಡಬೇಕು. ಈ ಕಾನೂನು ತಂದು ಅವರು ಗ್ರಾಮಸಭೆಗಳನ್ನು ಮಾಡದಿದ್ದರೆ ಅವರನ್ನು ಅನರ್ಹಗೊಳಿಸುತ್ತೇವೆಂದು 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ತರುವಂತಹ ಅವಶ್ಯಕತೆ ಇದೆಯೇ? System ಅನ್ನು ಬದಲಾವಣೆ ಮಾಡಬೇಕು. ಅದಕ್ಕೆ ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಆದರೆ ಮುಂದೆ ಈ System ನಿಂದ ಎಷ್ಟರಮಟ್ಟಿಗೆ ಅನುಕೂಲಗಳು ಆಗುತ್ತವೆ? ಸರಿಯಾದ ರೀತಿಯಲ್ಲಿ ಪಂಚಾಯಿತಿ ಸದಸ್ಯರಿಗೆ, ಇವತ್ತು ಅವರು ಕೆಲಸ ನಿರ್ವಹಿಸುವುದಕ್ಕೆ ಹಳ್ಳಿಯಲ್ಲಿರುವಂತಹ ಸಮಸ್ಯೆಗಳಿಗೆ ಆರ್ಥಿಕ ನೆರವು ದೊರಕದಿದ್ದರೆ ಹೇಗೆ? ಹಲವಾರು ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹಣವನ್ನೇ ಬಿಡುಗಡೆ ಮಾಡಿಲ್ಲ. ಇದರ ಬಗ್ಗೆ Joint Committee ಕಳುಹಿಸಿ ಸುದೀರ್ಘವಾಗಿ ಚರ್ಚೆ ಮಾಡಿ, ಕಾನೂನು ತರಲಿಕ್ಕೆ ವಿರೋಧ ವ್ಯಕ್ತಪಡಿಸುವಂಥದ್ದು ಏನೂ ಇಲ್ಲ. ನೀವು ಸಭೆ ಮಾಡದಿದ್ದರೆ, ಅಮಾನತುಗೊಳಿಸುತ್ತೇವೆ ಎಂದು ಹೇಳುವುದು ಏನಿದೆ? ಇವತ್ತು ಅವರಿಗೆ ಏನು ಅಧಿಕಾರ ಕೊಟ್ಟಿದ್ದೀರಿ? ಕಳೆದ ಸರ್ಕಾರದಲ್ಲಿಯೇ' ಜನ ಸ್ಪಂದನ' ಎನ್ನುವ ಕಾರ್ಯಕ್ರಮವನ್ನು ತಿಂಗಳಿಗೆ ಪ್ರತಿ ಶನಿವಾರವೋ ಅಥವಾ 15 ದಿವಸಕ್ಕೆ ಶನಿವಾರದಂದು ಒಮ್ಮೆ ಮಾಡುವುದನ್ನು ಜಾರಿಗೆ ತಂದರು. ಆ 'ಜನಸ್ಪಂದನ' ಕಾರ್ಯಕ್ರಮವನ್ನು ನಮ್ಮ ಶಾಸಕರುಗಳು ಮಾಡಿರುವುದನ್ನು ಗಮನಿಸಿದ್ದೇನೆ. ಮಾನ್ಯ ಪುಟ್ಟಣ್ಣನವರು ಮಾತನಾಡಿದರು, ಮಾನ್ಯ ರಮೇಶ್‌ಕುಮಾರ್‌ರವರು ಈ ವಿಷಯದ ಬಗ್ಗೆ ಏಕೋ ಮಾತನಾಡಲಿಲ್ಲ ಎಲ್ಲೋ ಹಿಂದೆ ಹೋದರು. ವೃದ್ಧಾಪ್ಯ ವೇತನ, ವಿಧವಾ ವೇತನವನ್ನು ಒಂದನೇ ತಾರೀಖು ಕೊಡಿ ಎಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು. ಇವತ್ತು 'ಜನಸ್ಪಂದನ' ಮಾಡಿರುವಂತಹ ಹಲವಾರು ಸಭೆಗಳಲ್ಲಿ ಶಾಸಕರುಗಳೇ ಮಾಡಿರುವಂತಹ ಸಭೆಗಳಲ್ಲಿ, ಹಲವಾರು ಹಳ್ಳಿಗಳಲ್ಲಿ ನಿಜವಾದ ವೃದ್ಧರು, ವಿಧವೆಯರು ಏನಿದ್ದಾರೆ, ಅವರನ್ನೇ ಇನ್ನೂ

ಗುರುತಿಸಲು ಸರ್ಕಾರಕ್ಕೆ ಆಗಲಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಯಕಶ್ಚಿತ್ ಒಬ್ಬ ಪಂಚಾಯಿತಿ ಸದಸ್ಯರು ಏನೂ ತಿಳುವಳಿಕೆ ಇಲ್ಲದವರು ಎಷ್ಟರ ಮಟ್ಟಿಗೆ ಈಗಿನ ಸರ್ಕಾರದ ಪಿ.ಡಿ.ಓ. ಹಾಗೂ ಸೆಕ್ರೆಟರಿಗಳನ್ನು ಹದ್ದುಬಸ್ತಿನಲ್ಲಿಟ್ಟು ಕೆಲಸ ಮಾಡಲಿಕ್ಕೆ ಸಾಧ್ಯ? ಆದ್ದರಿಂದ ಈ ರೀತಿಯ ಅನರ್ಹಗೊಳಿಸುವಂತಹ ಕಾನೂನು ಏನಿದೆ, ಅದರ ಬಗ್ಗೆ ದಯವಿಟ್ಟು ಇನ್ನೂ ಚರ್ಚೆ ಮಾಡೋಣ. ಇವತ್ತು ಚರ್ಚೆ ಮಾಡಿ ಮುಂದಿನ ಕಲಾಪದಲ್ಲಿ ತೆಗೆದುಕೊಂಡು ಬನ್ನಿ. ಈಗ ಹೊಸ ಸರ್ಕಾರ ರಚನೆ ಮಾಡಿಕೊಂಡಿದ್ದೀರಿ. ಸರ್ಕಾರದಲ್ಲಿ ನಮ್ಮ ವ್ಯವಸ್ಥೆಗಳನ್ನು ಸರಿಪಡಿಸಲು ಇಂತಹ ಒಂದು ಬ್ರಹ್ಮಾಸ್ತ್ರ ಬಿಟ್ಟು ತರುವುದಕ್ಕೆ ಸ್ವಲ್ಪ ಯೋಚನೆ ಮಾಡಿ. ಮುಂದಿನ ಕಲಾಪದಲ್ಲಿ ಬೇಕಾದರೆ ತೆಗೆದುಕೊಂಡು ಬನ್ನಿ. ಪಾಪ! ನಮ್ಮ ಕಾನೂನು ಸಚಿವರು ಹೇಳಿದರು, ಇವತ್ತು ಪಂಚಾಯಿತಿ Member ಗಳಿಗೆ ದುಡ್ಡು ಕೊಟ್ಟರೆ ಯಾವುದೋ ಒಂದು ಮನೆ ಮುಂದೆ ಒಂದು ಸಣ್ಣ ಮೋರಿ ಮಾಡಿಸಿ ಅಲ್ಲಿಗೆ ಕೆಲಸ ನಿಲ್ಲಿಸುತ್ತಾನೆ ಎಂದು ಹೇಳಿ, ಅವನಿಗೆ ಮುಂದುವರೆಸಲು ಪಂಚಾಯಿತಿ ದುಡ್ಡು ಕೊಡದೇ ಹೋದರೆ, ಅವನು ಸಂಪೂರ್ಣವಾಗಿ ಆ ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ ಮಾಡಲಿಕ್ಕೆ ಎಲ್ಲಿಂದ ಸಾಧ್ಯ? ಆದ್ದರಿಂದ ಇದರಲ್ಲಿ ಹಲವಾರು ರೀತಿ ನ್ಯೂನತೆಗಳು ಇದ್ದಾಗ, ಇದನ್ನು ಮುಂದೆ ಒಂದು ಕಮಿಟಿಯಲ್ಲಿ ಚರ್ಚೆ ಮಾಡಿಕೊಂಡು ಮುಂದಿನ ಸದನದಲ್ಲಿ ತರುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಈಗ ಸಮಯಾವಕಾಶವಿಲ್ಲ. ನಿನ್ನೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಕ್ತಾಯವಾಗಿದೆ ಅವರು ಉತ್ತರ ಕೊಡಬೇಕು. ಸ್ವಲ್ಪ ಸಮಯವಿತ್ತು ಎನ್ನುವ ಕಾರಣಕ್ಕಾಗಿ ಇದನ್ನು ತೆಗೆದುಕೊಂಡೆವು. ಚರ್ಚೆ ನಿಲ್ಲುವಂತಹ ಸ್ಥಿತಿಯಲ್ಲಿ ಕಾಣುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸದುದ್ದೇಶದಿಂದ ಏನು ಕೆಲವು ವಿಚಾರಗಳನ್ನು ವ್ಯಕ್ತ ಮಾಡಿದರು, ನಾನು ಅವರಲ್ಲಿಯೂ ವಿನಂತಿ ಮಾಡುತ್ತೇನೆ. ಇದು ತರಾತುರಿ ಎಂದು ದಯವಿಟ್ಟು ಯಾರೂ ಭಾವಿಸಬೇಡಿ. ನಮ್ಮ ಸಂಪೂರ್ಣ ಪ್ರಯತ್ನ ಏನೆಂದರೆ, ಯಾವುದನ್ನು ನೀವು ಕಾನೂನು ಮಾಡಿದಿರಿ, ಯಾವುದನ್ನು ಸಂವಿಧಾನ ಮಾಡಿದೆ, ಅದು ಯಾವುದೂ field

levelನ ಒಳಗೆ, ground level ನೊಳಗೆ ಅದು ಸರಿ ಇರಲಿ, ತಪ್ಪಿರಲಿ ಅನುಷ್ಠಾನವಾಗಲಿಲ್ಲ. ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ, elected representative ಗೆ ವಾರ್ಡ್ ಸಭೆಯನ್ನು ಕರೆಯಲು ಹಕ್ಕು ಇರುವುದು. ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ, ಪಂಚಾಯಿತಿ ಅಧ್ಯಕ್ಷ, elected representativeಗೆ ಗ್ರಾಮ ಸಭೆಯನ್ನು ಕರೆಯುವಂತಹ ಹಕ್ಕು ಇರುವುದು. ಇಲ್ಲಿಯವರೆಗೆ ವಾರ್ಡ್ ಸಭೆಯನ್ನೇ ಕರೆಯಲಿಲ್ಲವೆಂದರೆ, ಇಷ್ಟು ವರ್ಷದ ನಂತರ ಸನ್ಮಾನ್ಯ ಜಗದೀಶ್ ಶೆಟ್ಟರ್‌ರಂಥವರು ಆ ಇಲಾಖೆಯ ನಿರ್ವಹಣೆ ಮಾಡಿದ ಮೇಲೂ ಈ ತಿದ್ದುಪಡಿಯನ್ನು ತಂದರೆ, ಇದು ತರಾತುರಿ ತಿದ್ದುಪಡಿಯಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾನು ಒಬ್ಬನೇ ಅಲ್ಲ. ಬಹಳ ಜನರು ಮಾಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ತಾವು ಬಹಳ ಆಸಕ್ತಿಯಿಂದ ಮಾಡಿದ್ದೀರಿ. ಯಾವುದು ಮೂಲಭೂತವಾದದ್ದು? ತಾವೆಲ್ಲಾ empowerment of people ಎಂದು ಹೇಳಿದ್ದೀರಿ. What is empowerment of people if they are not called for discussion, if they are not convened for a meeting? ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಿಮ್ಮ ಸಂವಿಧಾನದ ಸದಾಶಯ ಇವತ್ತು ಅನುಷ್ಠಾನವಾಗಬೇಕೆಂದರೆ, ನಾವು ವಾರ್ಡ್ ಸಭೆಗಳನ್ನು ಕರೆಯಲೇಬೇಕು ಎಂದು ಹೇಳುವುದು ತಪ್ಪಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸಭೆಯನ್ನು ಕರೆಯಬೇಡಿ ಎಂದು ನಾವು ಹೇಳುತ್ತಿಲ್ಲ. ಸಭೆಯನ್ನು ಕರೆಯಲೇಬೇಕು. ಆದರೆ punishment ಯಾರಿಗೆ?

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ನೀವು ಮಾತನಾಡುವಾಗ ಸುಮ್ಮನೆ ಕುಳಿತು ನಾವು ಮಾತು ಕೇಳಲಿಲ್ಲವೇ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನೀವು ಹೇಳಿದ್ದನ್ನು ಅವರು ಕೇಳಿದ್ದಾರೆ. ಅವರು ಹೇಳಿದ್ದನ್ನು ಕೇಳಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ಪಿ.ಡಿ.ಓ. ಗಳಿಗೆ ಏಕೆ ಜವಾಬ್ದಾರಿ ಹಾಕಬಾರದು? ಪಿ.ಡಿ.ಓ. ಗಳಿಗೆ ಜವಾಬ್ದಾರಿ ಹಾಕಲಿಲ್ಲ ಅಥವಾ ಪಂಚಾಯತ್ ಸೆಕ್ರೆಟರಿಯವರಿಗೆ ಜವಾಬ್ದಾರಿ ಹಾಕಲಿಲ್ಲ. ಸಂವಿಧಾನದೊಳಗೆ ಆಯಿತು. ನಾವು ಮಾಡಿರತಕ್ಕಂಥ ಶಾಸನಗಳಲ್ಲಿ ಆಯಿತು. ನಾವು ಏನು ಮಾಡಿದ್ದೇವೆ ಎಂದರೆ, elected representative ಗೆ ಮಹತ್ವ, ಗೌರವ ಕೊಟ್ಟೆವು. ಅದು ಅವರ ಜವಾಬ್ದಾರಿ ಎಂದು ಹೇಳಿದೆವು. ಸಿ.ಎ.ಜಿ. ರಿಪೋರ್ಟ್ ಓದುತ್ತೀರಲ್ಲಾ? ಇವತ್ತು ಯಾವ ಕಾರಣಕ್ಕೆ ಇಷ್ಟೆಲ್ಲ ನಾವೂ ನೀವೂ ಸಹಿತ ತಲೆತಗ್ಗಿಸುವಂಥದ್ದು ಆಗಿದೆ? ಕಾರಣವೆಂದರೆ, ಸಿ.ಎ.ಜಿ. ರಿಪೋರ್ಟ್‌ನೊಳಗೂ ವಾರ್ಡ್ ಸಭೆ ಇಲ್ಲ. ಗ್ರಾಮ ಸಭೆ ಇಲ್ಲ. ಅದಕ್ಕೆ ಇದು illegal,ಅದು illegal ಎಂದು ಬಯೀಸಿಕೊಂಡು ಕುಳಿತಿದ್ದೇವೆ. ಆದ್ದರಿಂದ ನಾವು ಈ ತಿದ್ದುಪಡಿಯೊಳಗೆ ಸ್ಪಷ್ಟವಾಗಿ Ward member, ಯಾವುದು rules ನೊಳಗೆ ಇತ್ತು, ಅದನ್ನೂ ಸಹಿತ ಕೈ ಬಿಟ್ಟು ಇಲ್ಲಿ ಸ್ಪಷ್ಟಪಡಿಸಿದ್ದೇವೆ. ಅದರ ಜೊತೆಗೆ ಅವರು ಮೀಟಿಂಗ್ ಕರೆಯಬೇಕು. ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿದ್ದೇವೆ. ಈ ಗ್ರಾಮ ಸಭೆಯನ್ನು ಹಾಗೂ ವಾರ್ಡ್ ಸಭೆಗೆ ಅತ್ಯಂತ ಮಹತ್ವ ಕೊಡಬೇಕು. ಗ್ರಾಮಸಭೆಗೆ ಎಷ್ಟು ಮಹತ್ವ ಸಿಗಬೇಕೆಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರು ಸ್ವತಃ 'ನಾನು ಕೆಲವು ಗ್ರಾಮಸಭೆಗಳಿಗೆ attend ಮಾಡುತ್ತೇನೆ' ಎಂದು ಹೇಳಿದರು. ಏಕೆ ಆ ಮಹತ್ವ ಕೊಡುತ್ತೇವೆಂದರೆ, ಜನ ಗ್ರಾಮಸಭೆಗಳನ್ನು attend ಮಾಡಬೇಕು. ನೀವು ಹೇಳಿದಿರಿ, ಅಧಿಕಾರಿಗಳು ಯಾರೂ ಹೋಗುವುದಿಲ್ಲ, ಯಾವ ಅಧಿಕಾರಿಗಳಿಗೆ ಜವಾಬ್ದಾರಿ ಇರುತ್ತದೆಯೋ ಅವರು ಹೋಗುವುದಿಲ್ಲ. ಏನು ನಾವು ಚುನಾಯಿತ ಶಾಸಕರ ಬಗ್ಗೆ, ಚುನಾಯಿತ ಸದಸ್ಯರ ಬಗ್ಗೆ, ಈ ಸಂದರ್ಭದಲ್ಲಿ ಇಷ್ಟು ಕಠಿಣವಾದಂತಹ ಮಾತುಗಳನ್ನು ಹೇಳುತ್ತೇವೆ, ಅದೇ ರೀತಿಯಾದ ಕ್ರಮ ಆ ಅಧಿಕಾರಿಗಳ ಮೇಲೂ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ನಿಮಗೆ ಕೊಡುತ್ತೇನೆ. ಆದ್ದರಿಂದ ಸಂವಿಧಾನದ 73ನೇ ತಿದ್ದುಪಡಿ ಇವತ್ತು ನಿಜವಾಗಿಯೂ ಅನುಷ್ಠಾನವಾಗಬೇಕೆಂದರೆ ಮೂಲಭೂತವಾಗಿರತಕ್ಕಂಥ ಈ

ವಾರ್ಡ್ ಸಭೆ ಮಾಡುವಂಥದ್ದು ಆಗಬೇಕು. ಗ್ರಾಮಸಭೆ ಮಾಡುವಂಥದ್ದು ಆಗಬೇಕು. ಅದು ಆಗಬೇಕೆಂದರೆ ಅವರು ಸಭೆಯನ್ನು ಕರೆಯಬೇಕು. ಕರೆಯುವುದಕ್ಕೆ ಯಾರಿಗೆ ಜವಾಬ್ದಾರಿ ಇದೆ, ಒಂದು ವೇಳೆ ಆ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲವೆಂದರೆ, ನಾವು ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇಲ್ಲಿ ಯಾವುದೂ ರಾಜಕಾರಣ ಬರುವುದು ಹೋಗುವುದು ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಸಾವಿರ ಸಾವಿರ ಕೋಟಿ ರೂಪಾಯಿ ಗ್ರಾಮಸಭೆಯ ಒಪ್ಪಿಗೆ ಪಡೆದುಕೊಂಡು ನೀವು NREG ಒಳಗೆ ನಿಮ್ಮ ಕೆಲಸ ಮಾಡಬಹುದು. Beneficiaries ಅನ್ನು select ಮಾಡಬಹುದು. ಮನೆ ಪಟ್ಟಿಯೊಳಗೆ ಯಾರು ಇರುತ್ತಾರೋ ಅವರಿಗೆ ಮನೆಗಳನ್ನು ಕೊಡಬಹುದು. ವಾರ್ಡ್ ಸಭೆಯೊಳಗೆ recommendation ಮಾಡಬೇಕು. ಆ ಸಭೆಯೇ ಆಗಲಿಲ್ಲವೆಂದರೆ, ನಾವೂ ನೀವೂ ಕೂಡಿ ಪಟ್ಟಿಯಲ್ಲಿರುವವರಿಗೆ ಮನೆ ಕೊಟ್ಟ ರೀತಿ ಆಗುವುದಿಲ್ಲ. ಈ ಎಲ್ಲಾ ಹಿನ್ನೆಲೆಗಳನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆ ಕಾರಣಕ್ಕೆ ಈ ಒಂದು ಮಹತ್ವದ ಬಿಲ್ ಅನ್ನು ನಾವು ತೆಗೆದುಕೊಂಡು ಬಂದಿದ್ದೇವೆ. ದಯಮಾಡಿ ತಾವು ಇದನ್ನು ಅರ್ಥೈಸಿಕೊಳ್ಳುತ್ತೀರಿ, ಇದನ್ನು ನೀವು ಯಾವುದೇ ಕಾರಣಕ್ಕಾಗಲಿ ದುರ್ನಡತೆ ಇದೆ ಎಂದಾಗಲಿ ಅಥವಾ ಮತ್ತೊಂದು ಏನಾದರೂ ಇದೆ ಎಂದು ಹೇಳಿ ತಪ್ಪು interpret ಮಾಡಬಾರದು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಂಡು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಇದರ ಬಗ್ಗೆ ಚರ್ಚೆ ಸಾಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಒಂದು ರಾಜಕೀಯವಾದ ಹಿನ್ನೆಲೆ. ಈ ಒಂದು "ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ" ತಾವು ಕೂಡ ಆ ಕೆಳಹಂತದ ಆಡಳಿತದ ವ್ಯವಸ್ಥೆಯನ್ನು ನೋಡಿದವರಾಗಿದ್ದೀರಿ. ತಾವು ಕೂಡ ಅವರಿಗೆ ಸಲಹೆಯನ್ನು ಕೊಟ್ಟಿದ್ದೀರಿ. ಇದನ್ನು ತರುವುದು ಬೇಡ, ಈ ಬಗ್ಗೆ ವಿಚಾರ ಮಾಡಿ ಎಂದು ಹೇಳಿದ್ದೀರಿ.

ಅಧ್ಯಕ್ಷರು : ಹೌದು, ನಾನೂ ಸಹ ಹೇಳಿದ್ದೀನಿ. ತಾವು ಹೇಳಬೇಕಾಗಿರುವುದೆಲ್ಲವನ್ನು ಹೇಳಿದ್ದೀರಿ. ಅದು ಸರ್ಕಾರದ ತೀರ್ಮಾನಕ್ಕೆ ಬಿಟ್ಟ ವಿಚಾರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ವಿಧೇಯಕವನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಿ. ಈ ತರಹದ ತರಾತುರಿಯು ಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ದಯವಿಟ್ಟು repeat ಮಾಡುವುದಕ್ಕೆ ಹೋಗಬೇಡಿ. ಸರ್ಕಾರದವರು ಅವರ stand ಅನ್ನು ಅವರು ತೆಗೆದುಕೊಂಡಿದ್ದಾರೆ. ನಿಮ್ಮ stand ಬಗ್ಗೆ ನೀವು ಹೇಳಿದ್ದೀರಿ. ಇದನ್ನು ಒಪ್ಪುವುದು ಬಿಡುವುದು ಸರ್ಕಾರಕ್ಕೆ ಸೇರಿದ್ದು.

ಶ್ರೀ ಜಗದೀಶ್ ಶೆಟ್ಟರ್ : Appoint ಮಾಡುವ ಬಗ್ಗೆ ತಾವೇ ಹೇಳಿದ್ದೀರಿ.

ಅಧ್ಯಕ್ಷರು : ಅದು ಬೇರೆ ಮಾತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈ ವಿಧೇಯಕವನ್ನು withdraw ಮಾಡಬೇಕು.

ಅಧ್ಯಕ್ಷರು : O.K.please, ಆಯಿತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈ ವಿಧೇಯಕವನ್ನು ತಂದರೆ ಆಡಳಿತ ವಿಕೇಂದ್ರೀಕರಣಕ್ಕೆ ಇದು ಮಾರಕವಾಗಿದೆ.

(ಗೊಂದಲ)

ಅಧ್ಯಕ್ಷರು : ನೀವೆಲ್ಲರೂ ಹಿರಿಯ ಶಾಸಕರಾಗಿದ್ದೀರಿ. ಆ ರೀತಿಯಾಗಿ ಚರ್ಚೆ ಮಾಡಿದರೆ ಇದು ಚರ್ಚೆ ಆಗುತ್ತದೆಯೇ? ಅದನ್ನು ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ತಾವು ಈ ವಿಧೇಯಕವನ್ನು ತರಬೇಡಿ. ನಾವುಗಳು ಈ ವಿಧೇಯಕ ತರುವುದನ್ನು ವಿರೋಧಿಸಿ ಸದನದ ಬಾವಿಗೆ ಬರುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ದಯವಿಟ್ಟು ಯಾರೂ ಮಾತನಾಡುವುದಕ್ಕೆ ಹೋಗಬೇಡಿ. ಮಾನ್ಯ ಸುರೇಶ್ ಕುಮಾರ್‌ರವರೆ, ತಾವು ಸದನದ ಬಾವಿಗೆ ಬಂದು ನಿಂತಾದ ಮೇಲೆ ಅಲ್ಲಿಯ ಸಂಬಂಧ ಇರುವುದಿಲ್ಲ. ಈಗ ನಾನು ಈ ವಿಧೇಯಕವನ್ನು ಮತಕ್ಕೆ ಹಾಕುತ್ತೇನೆ. ಸರ್ಕಾರದವರು ಇದನ್ನು ಒಪ್ಪುವುದಿಲ್ಲ ಬಿಡಿ. ತಾವು ಹೇಳುವುದೆಲ್ಲವನ್ನೂ ಹೇಳಿದ್ದೀರಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಗೌಡರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ನಾನು ಸಚಿವರಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಮೀಟಿಂಗ್ ಅನ್ನು ಕರೆಯುವ ವಿಚಾರದಲ್ಲಿ ನಾನು ಹೇಳಿದ್ದೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ದಯವಿಟ್ಟು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ಇದನ್ನು ಮುಂದಿನ ಸದನದಲ್ಲಿ ತನ್ನಿ. ಈ ವಿಧೇಯಕವನ್ನು ತರುವುದರ ಬಗ್ಗೆ, ಈ ಪಂಚಾಯಿತಿ ವ್ಯವಸ್ಥೆಯನ್ನು ಇವತ್ತು ಉತ್ತಮವಾದ ಗುಣಾತ್ಮಕವಾದ ಮಟ್ಟಕ್ಕೆ ತರುವ ಬಗ್ಗೆ ನಮ್ಮ ವಿರೋಧ ಇಲ್ಲ. ಆದರೆ ನೀವು...

ಅಧ್ಯಕ್ಷರು : ಮಾನ್ಯ ಕುಮಾರಸ್ವಾಮಿಯವರೆ, ಈಗ ಸದನವನ್ನು ಮುಂದಕ್ಕೆ ಹಾಕುತ್ತೇನೆ. ಈ ಬಗ್ಗೆ ನಾನು ನನ್ನ ಛೇಂಬರಿಗೆ ಕರೆದು ಮಾತನಾಡುತ್ತೇನೆ. ಈಗ 10 ನಿಮಿಷಗಳ ಕಾಲ ಸಭೆಯನ್ನು ಮುಂದೂಡಲಾಗಿದೆ.

(ಸದನವು 12 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು 10 ನಿಮಿಷದ ನಂತರ ಪುನಃ ಸಭೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 1 ಗಂಟೆ 19 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಸ್ವತಂತ್ರ ಭಾರತದ ಇತಿಹಾಸದಲ್ಲಿ ಯಾವುದಾದರೂ ಒಂದು ಸಭೆ ಕರೆಯಲಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಒಬ್ಬ ಚುನಾಯಿತ ಪ್ರತಿನಿಧಿಯನ್ನು disqulify ಮಾಡುವಂಥದ್ದು, ಅವರನ್ನು ಅಧಿಕಾರದಿಂದ ತೆಗೆದುಹಾಕುವುದು ದೇಶದ ಇತಿಹಾಸದಲ್ಲಿ ಎಂದೂ ನಡೆದಿಲ್ಲ. ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ವ್ಯವಸ್ಥೆ ಆದಮೇಲೆ ಈ ದೇಶದ ಯಾವುದೇ ರಾಜ್ಯದಲ್ಲಿ ಇದನ್ನು ಮಾಡಿಲ್ಲ. ಇಂಥ ಒಂದು ಕರಾಳ ಶಾಸನವನ್ನು ತರುವುದರ ಮೂಲಕ ಚುನಾಯಿತ ಪ್ರತಿನಿಧಿಯನ್ನು ಬಲಿಪಶು ಮಾಡುವುದು ಸರಿಯಲ್ಲ. ಈ ಶಾಸನವನ್ನು ಒಪ್ಪಲು ಸಿದ್ಧವಿಲ್ಲ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ. ಈ ರೀತಿಯಲ್ಲಿ ಚುನಾಯಿತ ಪ್ರತಿನಿಧಿಯನ್ನು disqualify ಮಾಡುವುದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಇದು ಸಾಧ್ಯವಿಲ್ಲ.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ಈ ಚರ್ಚೆ ಮತ್ತೆ ಆಮೇಲೆ ಬರುತ್ತದೆ. ದಯವಿಟ್ಟು, ನಿಮ್ಮವರಿಗೆ ಹೇಳಿ. ದಯವಿಟ್ಟು, ಮತ್ತೆ ಈ ವಿಷಯ ಆಮೇಲೆ ಬರುತ್ತದೆ. ಈಗ ಮೊದಲು ರಾಜ್ಯಪಾಲರ ಭಾಷಣದ ಚರ್ಚೆಯನ್ನು ಪೂರೈಸೋಣ. ರಾಜ್ಯಪಾಲರ ಭಾಷಣದ ಮೇಲೆ ಇನ್ನೂ ಎರಡು ಜನ ಮಾತನಾಡುವವರಿದ್ದಾರೆ. ಅದನ್ನು ಪೂರೈಸಿಕೊಂಡು, ಅವರಿಂದ ಉತ್ತರ ತೆಗದುಕೊಳ್ಳೋಣ. ಮತ್ತೆ ಚರ್ಚೆ ಬರುತ್ತದೆಯಲ್ಲ ಆಗ ಮಾತನಾಡೋಣ. ಮಸೂದೆಯನ್ನು ಆಮೇಲೆ ಇಟ್ಟುಕೊಳ್ಳೋಣ. ಈ ಕಥೆಯನ್ನೆಲ್ಲಾ ಹೇಳುತ್ತಾ ಕುಳಿತರೆ ಆಗುತ್ತದೇನ್ರಿ? ನಂತರ ಹೇಳುತ್ತಾರೆ.

(ಈ ಹಂತದಲ್ಲಿ ಕೆಲವು ಭಾರತೀಯ ಜನತಾ ಪಕ್ಷ ಹಾಗೂ ಜಾತ್ಯಾತೀತ ಜನತಾದಳದ ಕೆಲವು ಸದಸ್ಯರುಗಳು ಸದನದ ಬಾವಿಯೊಳಗೆ ಬಂದು ಧರಣಿಯಲ್ಲಿದ್ದರು.)

ಅಧ್ಯಕ್ಷರು : ಅವರು ಏನು ಹೇಳುತ್ತಾರೆಯೋ ಅದನ್ನು ಕೇಳಿ ನಂತರ ನೀವು ಮಾತನಾಡಿ. ಕಾಗೇರಿಯವರೇ, ನೀವು ಮಾತನಾಡುವುದಾದರೆ ನಿಮ್ಮ

ಆಸನಕ್ಕೆ ಬಂದು ಮಾತನಾಡಿ. ನೀವು ಸದನದ ಬಾವಿಯೊಳಗೆ ನಿಂತು ಮಾತನಾಡಿದರೆ ನಾನು ಮಾತನಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಕುರಿತು ಸುದೀರ್ಘವಾದ ಚರ್ಚೆಯಾಯಿತು, ಸನ್ಮಾನ್ಯ ನಾಯಕರುಗಳು ಕೊಟ್ಟಿರುವಂಥ ಸಲಹೆಗಳೇನಿವೆ, ಆ ಹಿನ್ನಲೆಯೊಳಗೆ ಕೆಲವು ಬದಲಾವಣೆಗಳನ್ನು ಅವರು ಸೂಚಿಸಿದ್ದಾರೆ. ಅವುಗಳನ್ನು ಸಿದ್ಧಪಡಿಸುತ್ತಿದ್ದೇವೆ. ಮತ್ತೆ ನಮಗೆ ಅವಕಾಶ ಕೊಡಬೇಕಾಗುತ್ತದೆ. ಆಗ ಅವುಗಳನ್ನು present ಮಾಡಿದಾಗ ವಿವರವಾಗಿರುವಂಥ ಬಿಲ್ ಅನ್ನೂ ಸಹಿತ.....

ಅಧ್ಯಕ್ಷರು : ಆಯಿತು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ನಾವು ಒಂದೇ ಒಂದು ವಿಷಯದ ಬಗ್ಗೆ ಹೇಳುತ್ತಿದ್ದೇವೆ. ಗ್ರಾಮ ಪಂಚಾಯತಿ ಸದಸ್ಯರನ್ನು disqualify ಮಾಡುವ provisionಇಲ್ಲ. ದಯವಿಟ್ಟು ಅದನ್ನು ತೆಗೆಯಿರಿ.Responsibility fix ಮಾಡಿ. ಮೀಟಿಂಗ್ ಕರೆಯುವಂಥದ್ದು, CEO meeting ಕರೆಯುವಂಥದ್ದನ್ನು fix ಮಾಡಿ. ಆದರೆ, ಆ ಪಂಚಾಯತಿ ಸದಸ್ಯರನ್ನು disqualify ಮಾಡುವಂಥದ್ದು ಇಲ್ಲ, ಇವತ್ತು ಮೇಲಿನ ಹಂತದ ಯಾವ ಜನಪ್ರತಿನಿಧಿಗಳಿಗೂ ಈ punishment ಇಲ್ಲ. ಆ ಕೆಳಹಂತದ ಅಧಿಕಾರ ವಿಕೇಂದ್ರೀಕರಣ ಎಂದು ಹೇಳುತ್ತೀರಿ. ಪಂಚಾಯತ್ ಸದಸ್ಯರಿಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತೀರಿ. ಮತ್ತೊಂದು ಕಡೆ ಅಧಿಕಾರವನ್ನು ಮೊಟಕುಗೊಳಿಸುತ್ತೀರಿ. ಆದರೆ, ಅಧಿಕಾರಿಗಳು ತಪ್ಪು ಮಾಡಿದರೆ ಅವರಿಗೆ ಯಾವುದೇ punishment ಇಲ್ಲ. ಆದರೆ, ಪಂಚಾಯತಿ ಸದಸ್ಯರು ಮೀಟಿಂಗ್ ಕರೆದಿಲ್ಲ ಎನ್ನುವ ಕಾರಣದ ಮೇಲೆ ಅವರನ್ನು disqualify ಮಾಡುವುದು ಸರಿಯಲ್ಲ. ಆ ಬಿಲ್‌ನಲ್ಲಿ provision ಅನ್ನು ಹಿಂದಕ್ಕೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಶೆಟ್ಟರ್‌ರವರೇ, ನಾನು ಹೇಳುವುದನ್ನು ಕೇಳಿ ಸ್ವಲ್ಪ. ಒಂದು ನಿಮಿಷ ನನ್ನ ಮಾತನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಮಗೆ ಎಲ್ಲಿಯವರೆಗೆ ಉತ್ತರ ಬರುವುದಿಲ್ಲ, ಅಲ್ಲಿಯವರೆವಿಗೆ ನಾವು ಧರಣಿ ಮಾಡುತ್ತೇವೆ.

ಅಧ್ಯಕ್ಷರು : ಶೆಟ್ಟರೆ, ದಯವಿಟ್ಟು ಕುಳಿತುಕೊಳ್ಳಿ ಸ್ವಲ್ಪ, ಈಗ ನೀವು ಕೊಟ್ಟಂಥ ಸಲಹೆ ಮೇರೆಗೆ ಮತ್ತೊಂದು ಸಾರಿ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿದ್ದಾರೆ. ತಂದಾಗ ಇಲ್ಲಿ ಚರ್ಚೆಗೆ ಬರುತ್ತದೆ. ಆಗ ನೀವು ಏನು ಅಭಿಪ್ರಾಯ ಕೊಡಬೇಕೋ ಏನು ತೀರ್ಮಾನ ಮಾಡುತ್ತಾರೋ ಮಾಡಲಿ. ಈಗ ಬೇರೆ ಕಾರ್ಯಕ್ರಮವನ್ನು ಪೂರೈಸಿಕೊಳ್ಳೋಣ. ದಯವಿಟ್ಟು, ಅವರು ಬಿಲ್ ಅನ್ನು ತಂದಿಟ್ಟಾಗ ಮತ್ತೆ ಮಾತನಾಡುವುದಕ್ಕೆ ಪೂರ್ಣ ಅವಕಾಶವಿದೆ. ನಾನು ಶೆಟ್ಟರು ಅಲ್ಲಿ ಹೇಳಿದ್ದಾರೆ. ಅದಕ್ಕೋಸ್ಕರ ಈಗ ನಾನು ಹೇಳಿದ್ದೇನೆ. ಅವರು ಪುನಃ ತಿದ್ದುಪಡಿಯಾಗಿ ಒಂದು ಕರಡನ್ನು ತರುತ್ತಾರೆ. ಅದು ಚರ್ಚೆಗೆ ಈ ಸದನದಲ್ಲಿ ಬರುತ್ತದೆ. ಆ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯಗಳು ಯಾವ ರೀತಿ ಇದೆ ಎಂದು ಹೇಳುವುದಕ್ಕೆ ಅವಕಾಶವಿದೆ. ಅವರು ಹೇಳಿದ್ದು ಸರಿಯಿದ್ದರೆ ನೀವು ಒಪ್ಪಿಕೊಳ್ಳಿ. ಇಲ್ಲದಿದ್ದರೆ ನಿಮ್ಮ ತೀರ್ಮಾನಕ್ಕೆ ಬಿಟ್ಟಿರುವಂಥ ವಿಚಾರ. ದಯವಿಟ್ಟು ಈಗ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಅವಕಾಶ ಮಾಡಿ ಕೊಡಿ. ದಯವಿಟ್ಟು, ಆಮೇಲೆ ನಿಧಾನಕ್ಕೆ ಬರುತ್ತದೆ. ಕ್ಷಮಿಸಿ ಬಿಡಿ.

(ಗೊಂದಲ)

ಅಧ್ಯಕ್ಷರು : ಆಯಿತು, ಆಯಿತು, Thank you, very good, ಬನ್ನಿ.

(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿಗೆ ಬಂದಿದ್ದಂಥ ಸದಸ್ಯರೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಮರಳಿದರು)

ಅಧ್ಯಕ್ಷರು : ಬಿ.ಆರ್.ಪಾಟೀಲ್, ನೋಡಿ ಹತ್ತತ್ತೇ ನಿಮಿಷ. ಬೇಗ ಬೇಗ....

6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.

ಶ್ರೀ ಬಿ.ಆರ್.ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ಇವತ್ತು ರಾಜ್ಯಪಾಲರು ಈ ಸರ್ಕಾರದ ಮುಂದಿನ